ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಮಂಗಳವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 283 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com



ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರು,
ಎಂ.ಸಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರು
ಹುಣಸೂರು ವಿಧಾನಸಭಾ ಕ್ಷೇತ್ರ ಸೇವಾಕಾಂಕ್ಷಿಗಳಾದ
ಜಿ.ಡಿ.ಹರೀಶ್‌ಗೌಡ
ಅವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು
ಕೆ. ಉಮಾಶಂಕರ್
ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು
ಮೈಸೂರು ಜಿಲ್ಲಾ ಹಾಲು ಒಕ್ಕೂಟ
ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್
ಶುಭಕೋರುವವರು :
ಸಿದ್ಧಿವಿನಾಯಕ ಗ್ರೂಪ್
93437 06416


ಸನ್ಮಾನ್ಯ ಶ್ರೀ ಜಿ.ಡಿ ಹರೀಶ್ ಗೌಡ
ಅಧ್ಯಕ್ಷರು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ
ಹುಟ್ಟು ಹಬ್ಬದ ಶುಭಾಷಯಗಳು
Sri Sai Baba Printers
ಶ್ರೀಮತಿ ಸವಿತಾ ಸುರೇಶ್
ಸದಸ್ಯರು, ಮಹಾನಗರ ಪಾಲಿಕೆ, ಮೈಸೂರು
ಶುಭಕೋರುವವರು:
44ನೇ ವಾರ್ಡಿನ ಅಭಿಮಾನಿಗಳು


ಶ್ರೀ ಜಿ.ಡಿ. ಹರೀಶ್ ಗೌಡ
ಅವರಿಗೆ
ಜನ್ಮದಿನದ ಶುಭಾಶಯಗಳು
ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರು.
ಮನು ಬಿ ಗೌಡ
ಜೆಡಿಎಸ್ ಯುವ ಮುಖಂಡರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ವಾರ್ಡ್ ನಂ: 58 ರಾಮಕೃಷ್ಣ ನಗರ, ಮೈಸೂರ್
VISMAYA
ADVERTISERS

ಮೈಸೂರು ಮಿತ್ರ
ಮಂಗಳವಾರ 31 ಜನವರಿ 2023





ನಕ್ಕರೆ ಅದೇ ಸ್ವರ್ಗ

ಆತ : ಸಾರ್, ನೀವು ಕೊಟ್ಟ ಲಕೋಟೆ ಅಂಚೆ ಡಬ್ಬದಲ್ಲಿ ಹಾಕಿ ಬಂದೆ. ಅದರ ಮೇಲೆ ವಿಳಾಸ ಬರೆದಿರಲಿಲ್ಲ.

ಅವರು : ಮೊದಲೇ ಯಾಕೆ ಹೇಳಬಾರದಿತ್ತು!

ಆತ : ನೀವು ಯಾರಿಗೆ ಪತ್ರ ಕಳಿಸ್ತಿದ್ದೀರಿ ಅನ್ನೋದು ನನಗೆ ಸಹ ತಿಳಿಯಬಾರದು ಅಂತ ನೀವು ವಿಳಾಸ ಬರೆದಿಲ್ಲ ಅಂದುಕೊಂಡೆ ಸಾರ್!

ಮೈಸೂರು ಮಿತ್ರ

ಮಂಗಳವಾರ, 31 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬುದ್ಧಿವಂತರು ತಾವು ಇಚ್ಛಾ ಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ –ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಪ್ಪವಿಲ್ಲದ ಮಾತು / ತುಪ್ಪವಿಲ್ಲದ ಊಟ

ನಿಮ್ಮ ಪತ್ರಗಳು

ಸಮಾಜ ಸೇವೆಗೆ ಸಂದ ಪ್ರಶಸ್ತಿ

ಮಾನ್ಯರೆ,



ನಮ್ಮ ಪೂರ್ವಜರು ಬಳಸುತ್ತಿದ್ದ ಸಿರಿ ಧಾನ್ಯಗಳ ಮಹತ್ವವನ್ನು ಸಾರ್ವಜನಿಕರಿಗೆ ಹಗಲಿರುಳೆನ್ನದೆ ಮನವರಿಕೆ ಮಾಡಿಕೊಡುತ್ತಿರುವ ವಿಜ್ಞಾನಿ ಸಂತನಾದ ಮೈಸೂರಿನ ಡಾ. ಖಾದರ್ ಅವರಿಗೆ ಈ ಬಾರಿ ಪದ್ಮಶ್ರೀ ಪ್ರಶಸ್ತಿ ಲಭಿಸಿರುವುದು ಸಂತಸ ತಂದಿದೆ. ಜೀವ ರಾಸಾಯನಿಕ ವಿಜ್ಞಾನದಲ್ಲಿ ಸ್ಟೆರಾಯ್ಡ್‌ಗಳ ಅಧ್ಯಯನ ನಡೆಸಿ, ಡಾಕ್ಟರೇಟ್ ಪದವಿ ಪಡೆದ ಇವರು ಅಮೆರಿಕದಲ್ಲಿ ದೊಡ್ಡ ದೊಡ್ಡ ಕಂಪನಿಗಳು ಕೊಟ್ಟ ಉನ್ನತ ಹುದ್ದೆಗಳ ಅವಕಾಶವನ್ನು ಕೈ ಚೆಲ್ಲಿ, ಲಕ್ಷ ಲಕ್ಷಗಟ್ಟಲೆ ಸಂಬಳ, ವಿಲಾಸಿ ಜೀವನವನ್ನು ತೊರೆದು, ಭಾರತಕ್ಕೆ ಬಂದು ನೆಲೆಸಿ, ನಮ್ಮ ಭಾರತೀಯರಿಗೆ ಆರೋಗ್ಯ ಕ್ಷೇತ್ರದಲ್ಲಿ ಏನಾದರೂ ಕೊಡುಗೆಯನ್ನು ನೀಡಬೇಕು ಎಂಬ ಮನಸ್ಸು ಚಡಪಡಿಸುತ್ತಿತ್ತು. ಅದರಂತೆ ನಮ್ಮದೇ ದೇಶೀ ಆಹಾರವಾದ ಸಿರಿಧಾನ್ಯಗಳನ್ನು ತಾವೇ 8 ಎಕರೆ ಬಂಜರು ಭೂಮಿಯಲ್ಲಿ ಬೆಳೆದು ಸೈಎನಿಸಿಕೊಂಡು, ಸಿರಿಧಾನ್ಯದಿಂದ ಅನೇಕ ರೋಗಗಳಿಗೆ ರಾಮಬಾಣ ಎಂಬುದನ್ನು ಮನಗಂಡು, ಸ್ವತಃ ತಾವು ಕೂಡ ದಿನನಿತ್ಯದ ಆಹಾರ ಪದ್ಧತಿಯಲ್ಲಿ ಉಪಯೋಗಿಸುವುದರ ಮೂಲಕ ಇತರರಿಗೆ ಸ್ಫೂರ್ತಿ ಮತ್ತು ಮಾದರಿಯಾಗಿದ್ದಾರೆ. ಇವರು ಮೂಲತಃ ಹೋಮಿಯೋಪತಿ ವೈದ್ಯರಾಗಿದ್ದು, ಪ್ರಸ್ತುತ ದಿನಗಳಲ್ಲಿ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳಲ್ಲಿ ವೈದ್ಯರು ಹಣ ಮಾಡುವುದನ್ನೇ ದೊಡ್ಡ ದಂಧೆಯನ್ನು ಮಾಡಿಕೊಂಡಿರುವ, ಸಾವಿರಾರು ರೂಪಾಯಿಗಳನ್ನು ಸುಲಿಗೆ ಮಾಡುವ ಬಹುಸಂಖ್ಯಾತ ವೈದ್ಯರುಗಳಿಗೆ ಮಾದರಿಯಾಗಿದ್ದಾರೆ. ಚಿಕಿತ್ಸೆಯನ್ನು ಕಡಿಮೆ ವೆಚ್ಚದಲ್ಲಿ ನೀಡುತ್ತಾ ಅನೇಕ ಖಾಯಿಲೆಗಳನ್ನು ಗುಣಪಡಿಸುತ್ತಾ ಬಡ ಜನರಿಗೆ ಆಶಾಕಿರಣವಾಗಿದ್ದಾರೆ. ತಮ್ಮ ಮನೆಯಲ್ಲಿ ವಾರಕ್ಕೊಮ್ಮೆ ಸಿರಿಧಾನ್ಯಗಳ ಮಹತ್ವದ ಬಗ್ಗೆ ಉಪನ್ಯಾಸ ನೀಡುತ್ತಿದ್ದಾರೆ. ಇಷ್ಟೇ ಅಲ್ಲದೆ ದೇಶ, ವಿದೇಶಗಳಿಗೆ ಹೋಗಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಮತ್ತು ಉಪನ್ಯಾಸವನ್ನು ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ತಮ್ಮ ಬಳಿ ಬರುವ ಕ್ಯಾನ್ಸರ್, ಶುಗರ್, ಬಿಪಿ, ಹೃದಯ, ಸಂಧಿವಾತ, ಲಿವರ್, ಕಿಡ್ನಿ ಇನ್ನಿತರ ಸಮಸ್ಯೆಗಳ ರೋಗಿಗಳಿಗೆ ಚಿಕಿತ್ಸೆ ನೀಡಿ ಸಾಯುವ ಸ್ಥಿತಿಯಲ್ಲಿರುವವರನ್ನು ಬದುಕಿಸಿ ಅವರ ಪಾಲಿಗೆ ದೇವರಾಗಿದ್ದಾರೆ. ವಾರದಲ್ಲಿ ಒಂದು ದಿನ ಗ್ರಾಮಗಳಿಗೆ ತೆರಳಿ ಉಚಿತವಾಗಿ ರೋಗಿಗಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಸಿರಿಧಾನ್ಯಗಳ ಉಪಯೋಗಗಳನ್ನು ಪತ್ರಿಕೆ ಮತ್ತು ಮಾಧ್ಯಮಗಳ ಮುಖಾಂತರ "ಸಿರಿ ಬದುಕು" ಎಂಬ ಶೀರ್ಷಿಕೆ ಅಡಿಯಲ್ಲಿ ಇಂದಿನ ಆಹಾರ ಪದ್ಧತಿಗಳಿಂದ ಆಗುವ ದುಷ್ಪರಿಣಾಮಗಳನ್ನು ಹೋಲಿಕೆ ಮಾಡಿ ವಾಸ್ತವದ ಉದಾಹರಣೆ ಮತ್ತು ನಿದರ್ಶನಗಳ ಮೂಲಕ ಎಳೆ ಎಳೆಯಾಗಿ ತಮ್ಮದೇ ಮಾತಿನ ಶೈಲಿಯಲ್ಲಿ ಮನದಟ್ಟು ಮಾಡುತ್ತಿದ್ದಾರೆ. "ವೈದ್ಯೋ ನಾರಾಯಣೋ ಹರಿಃ" ಎಂಬಂತೆ ಕೇಂದ್ರ ಸರ್ಕಾರವು ಇವರ ಸೇವೆಯನ್ನು ಪರಿಗಣಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿರುವುದರಿಂದ ಪ್ರಶಸ್ತಿಯ ಮೌಲ್ಯವೇ ದುಪ್ಪಟ್ಟಾಗುತ್ತದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ರಾಜ್ಯ ನಾಯಕರ ಮಾತಿನ ಕೆಸರೆರಚಾಟ

ಮಾನ್ಯರೆ,

ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ನಾಯಕರು ಸಾರ್ವಜನಿಕವಾಗಿ ಹೇಗೆ "ಮಾತಿನ ಕೆಸರೆರಚಾಟ" ವಾಡುತ್ತಿದ್ದಾರೆ ಎಂದರೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಕೋಲಾರದಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದ ಯಡಿಯೂರಪ್ಪನವರಿಗೆ, ಯಡಿಯೂರಪ್ಪ ಏನ್ ಶಾಸ್ತ್ರ ಹೇಳ್ತಾನಾ? ಎಂದರು ಸಿದ್ದರಾಮಯ್ಯ. ಇನ್ನು ಸಿ.ಟಿ. ರವಿ ಮಾತನಾಡುತ್ತಾ ಸಿದ್ದರಾಮಯ್ಯ ಸ್ಪರ್ಧೆ ಮಾಡಲು ಪಾಕಿಸ್ತಾನವೇ ಸೇಫ್ ಎಂದರೆ, ಸಿ.ಟಿ. ರವಿಗೆ ಕಲ್ಚರ್ ಇಲ್ಲ ಎಂದರು ಸಿದ್ದರಾಮಯ್ಯ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ "ಚಪ್ಪಲಿ" ವ್ಯಾಖ್ಯಾನಕ್ಕೆ ಡಿ.ಕೆ.ಶಿವಕುಮಾರ ಅವರು ಅಂದೊಂದು "ಬಚ್ಚಲು ಬಾಯಿ" ಎಂದರು. ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಹಣಕ್ಕಾಗಿ ತಮ್ಮತನವನ್ನೇ ಮಾರಿಕೊಂಡವರನ್ನು "ವೇಶ್ಯೆ" ಯರಿಗೆ ಹೋಲಿಸಿದ ಹರಿಪ್ರಸಾದ್ ಅವರನ್ನು, ಅವನೊಬ್ಬ ಕಾಲೇಜು ರೌಡಿ ಎಂದರು.

ಚುನಾವಣೆ ಹತ್ತಿರ ಬರುತ್ತಿದ್ದಂತೆ, ಇನ್ನೂ ಎಂತಹ ನುಡಿ ಮುತ್ತುಗಳು ಬರುತ್ತವೆಯೋ? ಹೇಗೂ, ಕನ್ನಡ ಸಿನಿಮಾದಲ್ಲಿ ಹಾಸ್ಯ ನಟರು ಕಡಿಮೆಯಾಗುತ್ತಿರುವುದರಿಂದ, ಸರ್ಕಸ್‌ಗಳಲ್ಲಿ ಜೋಕರ್‌ಗಳು ಕಾಣುತ್ತಿಲ್ಲದಿರುವುದರಿಂದ ಅವರ ಸ್ಥಾನವನ್ನು ನಮ್ಮ ರಾಜಕಾರಣಿಗಳು ತುಂಬುತ್ತಿದ್ದಾರೆ. ಪುಗಸಟ್ಟೆ ಮನರಂಜನೆ ನೀಡುತ್ತಿದ್ದಾರೆ. ಇವರು ಹೀಗೆ ಮುಂದುವರೆಸಲಿ, ನಾವು ಥಿಯೇಟರ್‌ಗೆ ಹೋಗಿ "ಸಿನಿಮಾ" ನೋಡುವುದಾದರೂ ತಪ್ಪುತ್ತದೆ. **–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು**

ದೇವಸ್ಥಾನದ ಸುತ್ತಮುತ್ತ ಇದೆಂತಹ ಸ್ಥಿತಿ

ಮಾನ್ಯರೆ,

ಮೈಸೂರು ಜಿಲ್ಲೆ ಟಿ.ನರಸೀಪುರ ಒಂದು ಐತಿಹಾಸಿಕ ಹಿನ್ನೆಲೆಯುಳ್ಳ ಪವಿತ್ರ ಸ್ಥಳ. ಊರಿನ ಮಗ್ಗುಲಲ್ಲೇ ಹೆಸರಾಂತ ಕಪಿಲ, ಕಾವೇರಿ ಹಾಗೂ ಸ್ಫಟಿಕ ಸರೋವರಗಳು ಹರಿಯುತ್ತಿವೆ. ಅದಕ್ಕೆ ಕಳಸಪ್ರಾಯವೆಂಬಂತೆ ಮೂರು ವರ್ಷಕ್ಕೊಮ್ಮೆ ಪ್ರಸಿದ್ಧ ಕುಂಭಮೇಳ ಜರುಗುತ್ತದೆ. ದೇವಸ್ಥಾನದ ಸ್ವಲ್ಪ ದೂರಕ್ಕೆ ಶ್ರೀ ಅಗಸ್ತ್ಯೇಶ್ವರ ದೇವಾಲಯ ಇದೆ ಮತ್ತು ಪಕ್ಕದಲ್ಲೇ ಶ್ರೀ ಬಳೇಶ್ವರ ದೇವಾಲಯ ನಿರ್ಮಾಣವಾಗಿದೆ. ಜೊತೆಗೆ ಇತ್ತೀಚೆಗೆ ದೇವಾಲಯದ ಮುಂಭಾಗ ಹರಿಯುತ್ತಿರುವ ಕಪಿಲಾ ನದಿಯ ದಡದಲ್ಲಿ ಕಲ್ಲಿನ ಸೋಪಾನಗಳನ್ನು ನಿರ್ಮಿಸಲಾಗಿದೆ. ಒಟ್ಟಾರೆ ಪ್ರವಾಸಿಗರಿಗೆ ಬಹು ಆಹ್ಲಾದಕರ ವಾತಾವರಣ ಇರುವ ಸುಂದರ ಜಾಗವಾಗಿದೆ.

ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳು ಈ ದೇವಾಲಯದ ಆಸು–ಪಾಸಿನಲ್ಲಿ ಜೋಡಿ ಕುಳಿತು ಹೆಗಲ ಮೇಲೆ ಕೈ–ಕೈ ಹಾಕಿಕೊಂಡು ಲಲ್ಲೆ ನಡೆಸುವುದು, ಇದರ ಜೊತೆಗೆ ಪೋಲಿ ಹುಡುಗರ ಸುತ್ತಾಟ, ಅಲ್ಲಿಗೆ ಬರುವ ಭಕ್ತಾದಿಗಳಿಗೆ ಕಿರಿಕಿರಿ ಮತ್ತು ಅಸಹ್ಯ ಭಾವನೆ ತರಿಸುತ್ತಿದೆ. ಧನುರ್ಮಾಸದ ಸಂದರ್ಭದಲ್ಲಿ ಸಂಜೆ ವೇಳೆ ಹೆಣ್ಣು ಮಕ್ಕಳು, ಗೃಹಿಣಿಯರು ಅಲ್ಲೇ ಇರುವ ಅಶ್ವತ್ಥಕಟ್ಟೆ ಪ್ರದಕ್ಷಿಣೆ ಹಾಕಲು ಬಂದರೆ ಬಹಳ ಮುಜುಗರದಿಂದಲೇ ತಮ್ಮ ವ್ರತ, ಪೂಜೆ ನೆರವೇರಿಸುವಂತಹ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲೇ ಓಡಾಡುತ್ತಿದ್ದ ಕೆಲ ವಿದ್ಯಾರ್ಥಿಗಳನ್ನು ವಿಚಾರಿಸಲಾಗಿ ಕೆಲವು ದಿನಗಳಲ್ಲಿ ಕಾಲೇಜು ನಿಗದಿತ ವೇಳೆಗಿಂತ ಮುಂಚೆ ಬಿಡುವುದರಿಂದ ಇಂತಹ ವಿದ್ಯಾರ್ಥಿಗಳಿಗೆ ಈ ದೇವಸ್ಥಾನದ ಸುತ್ತ–ಮುತ್ತಲ ಜಾಗ ಅನುಕೂಲವಾಗಿ ಪರಿಣಮಿಸಿದೆ. ಇದು ದೇವಸ್ಥಾನ, ಇದು ಪವಿತ್ರವಾದ ಸ್ಥಳ ಎನ್ನುವ ಪರಿಜ್ಞಾನ ಇಲ್ಲದೇ ಎಗ್ಗು–ಸಿಗ್ಗಿಲ್ಲದೇ ನಿರಾತಂಕವಾಗಿ ಈ ಆಟಗಳು ನಡೆಯುತ್ತಿದ್ದು, ಇಲ್ಲಿಗೆ ಬರುವ ಭಕ್ತಾದಿಗಳಿಗೆ ಮತ್ತು ಪ್ರವಾಸಿಗರಿಗೆ ಅತ್ಯಂತ ಮುಜುಗರ ಉಂಟಾಗುತ್ತಿದೆ.

ಆದ್ದರಿಂದ ಇನ್ನು ಮುಂದಾದರೂ ಗುಂಜಾ ನರಸಿಂಹಸ್ವಾಮಿ ದೇವಾಲಯದ ಬಳಿ ಕಾಲೇಜು ವಿದ್ಯಾರ್ಥಿಗಳ ಹಾಗೂ ಪೋಲಿ ಹುಡುಗರ ಪ್ರೇಮದಾಟ ತಪ್ಪಿಸಿ ದೇವಾಲಯದ ಪರಿಸರದ ಪಾವಿತ್ರ್ಯತೆಯನ್ನು ಕಾಪಾಡಲು ದೇವಾಲಯದ ಮುಖ್ಯಸ್ಥರು ಪಟ್ಟಣದ ಪ್ರಜ್ಞಾವಂತ ನಾಗರಿಕರು, ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಗಮನ ಹರಿಸುವುದೇ? –ಸಿದ್ದರಾಜು, ಲಲಿತಮಹಲ್ ನಗರ, ಮೈಸೂರು.



"ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರೂ ಆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್‌ನ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಮಾಜಿ ಸಚಿವರೂ, ಚಾಮುಂಡೇಶ್ವರಿ ಕ್ಷೇತ್ರದ ಹಾಲಿ ಶಾಸಕರೂ ಆದ ಜಿ.ಟಿ.ದೇವೇಗೌಡರು ಹಾಗೂ ಹಿರಿಯ ಸಹಕಾರಿಗಳು, ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಜಿಪಂ ಮಾಜಿ ಸದಸ್ಯೆ ಲಲಿತಾ ಜಿ.ಟಿ.ದೇವೇಗೌಡರ ಪುತ್ರನಾದ ಇವರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸದಸ್ಯನಾಗಿ ಸಹಕಾರ ಕ್ಷೇತ್ರ ಪ್ರವೇಶಿಸಿ ಇದೀಗ ಡಿಸಿಸಿ ಬ್ಯಾಂಕ್ ಚುಕ್ಕಾಣಿ ಹಿಡಿದು ಐತಿಹಾಸಿಕ ಅಭಿವೃದ್ಧಿ ದಾಖಲಿಸಿದ್ದಾರೆ. ವಿದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದ ಇವರು, ತಾಯಿ ಜಿಪಂ ಚುನಾವಣೆಯಲ್ಲಿ ಸ್ಪರ್ಧಿಸಿದ ಸಂದರ್ಭದಲ್ಲಿ ಪ್ರಚಾರದಲ್ಲಿ ನೆರವಾಗುವ ಮೂಲಕ ಆಕಸ್ಮಿಕವಾಗಿ ರಾಜಕೀಯ ರಂಗಕ್ಕೆ ಅಡಿ ಇಟ್ಟರೂ ರಾಜಕೀಯವಾಗಿಯೂ ಪ್ರಬಲ ಯುವ ಮುಖಂಡರಾಗಿ ಬೆಳೆದಿದ್ದಾರೆ. ಸಂಘಟನಾ ಶಕ್ತಿ, ಜನರೊಂದಿಗೆ ಬೆರೆಯುವ ಗುಣ, ಉತ್ತಮ ಆಡಳಿತ ಪ್ರತಿಭೆಯಿಂದ ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಯ ಜನರಿಗೆ ಚಿರಪರಿಚಿತರಾಗಿರುವುದಲ್ಲದೆ ಯುವ ನಾಯಕನಾಗಿ ಬೆಳೆದಿದ್ದಾರೆ. ತಂದೆ–ತಾಯಿಯ ಹೆಸರಿನ ಬಲದಿಂದ ಹೊರತಾಗಿ ಸ್ವಂತಶಕ್ತಿಯಿಂದ ಯುವ ಜನನಾಯಕರಾಗಿರುವ ಜಿ.ಡಿ.ಹರೀಶ್ ಗೌಡರಿಗೆ ಇಂದು ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಪಯಣ, ಗುರಿ, ಸದುದ್ದೇಶಗಳ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಹಂಚಿಕೊಂಡಿದ್ದಾರೆ.

ಜನರೊಂದಿಗಿರುವುದರಲ್ಲಿ ಸುಖವಿದೆ...

● ಸಂದರ್ಶನ: ಎಸ್.ಬಿ.ದೇವರಾಜ



ಮೈಸೂರು ಮಿತ್ರ: *ಹುಣಸೂರಿನ ಜೆಡಿಎಸ್ ಅಭ್ಯರ್ಥಿಯಾಗಿ ತಮ್ಮನ್ನು ಘೋಷಿಸಿದ ನಂತರದಲ್ಲಿ ಕ್ಷೇತ್ರದ ರಾಜಕೀಯ ವಾತಾವರಣ ಹೇಗಿದೆ?*

ಜಿ.ಡಿ.ಹರೀಶ್‌ಗೌಡ: ಹುಣಸೂರು ಕ್ಷೇತ್ರದ ಜನ ನನ್ನನ್ನು ಮನೆಮಗನಂತೆ ಕಂಡಿದ್ದಾರೆ, ಈಗ ಅದಕ್ಕೂ ಹೆಚ್ಚಿನ ಪ್ರೀತಿ ತೋರುತ್ತಿದ್ದಾರೆ. ನಮ್ಮ ಬಾಂಧವ್ಯ ತುಂಬಾ ಗಟ್ಟಿಯಾಗಿದೆ. ಮುಂಬರುವ ಚುನಾವಣೆಗೆ ನನ್ನನ್ನು ಜೆಡಿಎಸ್ ಅಭ್ಯರ್ಥಿಯನ್ನಾಗಿ ವರಿಷ್ಠರಾದ ಹೆಚ್.ಡಿ.ದೇವೇಗೌಡರು, ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಘೋಷಿಸಿದ ಬಳಿಕ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಮತ್ತಷ್ಟು ಉತ್ಸಾಹದಿಂದ ಒಟ್ಟಾಗಿ ಶ್ರಮಿಸುತ್ತಿದ್ದಾರೆ. ತಾಲೂಕಿನ ಜನತೆ ರಾಜಕೀಯ ಬದಲಾವಣೆ ಬಯಸಿದ್ದಾರೆ. ಪಕ್ಷದ ನಾಯಕರ ಮಾರ್ಗದರ್ಶನದಲ್ಲಿ ಕ್ಷೇತ್ರ ಪ್ರವಾಸಕ್ಕೆ ಹೋದಲ್ಲೆಲ್ಲಾ ಅತ್ಯುತ್ತಮವಾದ ಪ್ರತಿಸ್ಪಂದನೆ ವ್ಯಕ್ತವಾಗಿದೆ. ಪ್ರತಿ ಮನೆಗೆ ಹೋದಾಗಲೂ ಅತ್ಯಂತ ಪ್ರೀತಿ ವಿಶ್ವಾಸದಿಂದ ಬರಮಾಡಿಕೊಂಡು ಈ ಬಾರಿ ಖಂಡಿತವಾಗಿ ನಿಮ್ಮನ್ನು ಬೆಂಬಲಿಸುತ್ತೇವೆ ಎಂದು ಭರವಸೆ ನೀಡುತ್ತಿದ್ದಾರೆ.

ಮಿತ್ರ: *ಜನ ಆಶೀರ್ವದಿಸಿ ಚುನಾವಣೆಯಲ್ಲಿ ತಾವು ಗೆದ್ದು ಶಾಸಕರಾದರೆ ತಮ್ಮಿಂದ ಜನ ಏನೆಲ್ಲಾ ನಿರೀಕ್ಷಿಸಬಹುದು?*

ಜಿಡಿಹೆಚ್: ಕ್ಷೇತ್ರದಲ್ಲಿ ಈವರೆಗೂ ಸಾಧ್ಯವಾದಷ್ಟು ಸೇವೆ ಮಾಡಿಕೊಂಡು ಬಂದಿದ್ದೇವೆ. ಆದರೂ ಶಾಲೆಗಳು, ಆಸ್ಪತ್ರೆಗಳ ಅಭಿವೃದ್ಧಿಪಡಿಸಬೇಕು. ಸಹಕಾರಿ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ವಿಶೇಷ ಅವಕಾಶ ಕಲ್ಪಿಸುವ ಮೂಲಕ ಅವರ ಆರ್ಥಿಕ ಸಬಲೀಕರಣಕ್ಕೆ ನೆರವಾಗಬೇಕು. ಕ್ಷೇತ್ರದ ಯುವ ಸಮುದಾಯ ಉದ್ಯೋಗಕ್ಕೆ ಮೈಸೂರು, ಬೆಂಗಳೂರಿಗೆ ವಲಸೆ ಹೋಗುವುದನ್ನು ತಪ್ಪಿಸಿ, ಕ್ಷೇತ್ರದಲ್ಲೇ ಉದ್ಯೋಗ ಕಲ್ಪಿಸಿಕೊಡುವ ಮೂಲಕ ಕುಟುಂಬದೊಂದಿಗೆ ಸಂತೋಷವಾಗಿರುವಂತೆ ಯೋಜನೆ ರೂಪಿಸಬೇಕು. ಕ್ಷೇತ್ರದಲ್ಲಿ ಮೂಲ ಸೌಕರ್ಯ ಕೊರತೆಯಿದೆ, ಅಭಿವೃದ್ಧಿ ಕುಂಟಿತವಾಗಿದೆ. ಹಾಗಾಗಿ ರಸ್ತೆ, ಚರಂಡಿ, ಸಮುದಾಯ ಭವನ ಇನ್ನಿತರ ಅಭಿವೃದ್ಧಿ ಕಾರ್ಯಗಳ ಜೊತೆಗೆ ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಆಶಯ ಹೊಂದಿದ್ದೇನೆ. ಪಕ್ಷದ ನಾಯಕರು, ಮುಖಂಡರು, ಕಾರ್ಯಕರ್ತರು ಹಾಗೂ ಮತದಾರರ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿ ತನ್ನೆಲ್ಲಾ ಚಿಂತನೆಗಳನ್ನು ಸಾಕಾರಗೊಳಿಸುವ ವಿಶ್ವಾಸವಿದೆ.

ಮಿತ್ರ: *ನಿಮ್ಮ ತಂದೆ ಜಿ.ಟಿ.ದೇವೇಗೌಡರು ಪ್ರತಿನಿಧಿಸುವ ಚಾಮುಂಡೇಶ್ವರಿ ಕ್ಷೇತ್ರದೊಂದಿಗೆ ಉತ್ತಮ ಒಡನಾಟ ಹೊಂದಿದ್ದೀರಿ. ನಿಮ್ಮ ಗಮನಕ್ಕೆ ಬಂದಂತೆ ಸದ್ಯದ ರಾಜಕೀಯ ಪರಿಸ್ಥಿತಿ ಹೇಗಿದೆ?*

ಜಿಡಿಹೆಚ್: ಚಾಮುಂಡೇಶ್ವರಿ ಕ್ಷೇತ್ರದ ಜನರೂ ಕೂಡ ಬಹಳ ಪ್ರಜ್ಞಾವಂತರು. ಇದೊಂದು ವಿಭಿನ್ನ ಕ್ಷೇತ್ರವಾಗಿದ್ದು ನಗರ ಹಾಗೂ ಗ್ರಾಮೀಣ ಪ್ರದೇಶವನ್ನು ಒಳಗೊಂಡಿದೆ. ಇಲ್ಲಿನ ಮತದಾರರಿಗೆ ಯೋಚಿಸುವ ಶಕ್ತಿ ಇದೆ. ಕ್ಷೇತ್ರದಲ್ಲಿ ರಾಜಕೀಯವಾಗಿ ಏನೆಲ್ಲಾ ಬೆಳವಣಿಗೆಗಳಾದರೂ ಕೂಡ ಜಿ.ಟಿ.ದೇವೇಗೌಡರಿಗೆ ಜನರಲ್ಲಿ ವಿಶ್ವಾಸ ಮತ್ತಷ್ಟು ಗಟ್ಟಿಯಾಗಿದೆ. ಜಿ.ಟಿ.ದೇವೇಗೌಡರು 2013ರಲ್ಲಿ ಪ್ರಥಮ ಬಾರಿಗೆ ಸ್ಪರ್ಧೆ ಮಾಡಿದರು. ಅಲ್ಲಿಂದ ಇಲ್ಲಿಯವರೆಗೆ ಸತತ 10 ವರ್ಷ ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಹಿತಕ್ಕಾಗಿ ಕೆಲಸ ಮಾಡಿದ್ದಾರೆ. ಜಿಟಿಡಿ ಅವರ ಕೆಲಸ ಕಾರ್ಯಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಸಾಮಾನ್ಯ ವ್ಯಕ್ತಿಯೂ ಕೂಡ ಜಿಟಿಡಿ ಅವರನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದೆಂಬ ವಾಸ್ತವ ಗೊತ್ತಿದೆ. ಇತ್ತೀಚಿನ ರಾಜಕೀಯ ಬೆಳವಣಿಗೆಯ ಕಾರಣಕರ್ತರು ಹಾಗೂ ಜಿ.ಟಿ.ದೇವೇಗೌಡರ ಜನಪರ ಚಿಂತನೆ ಹಾಗೂ ಅವರ ಶಕ್ತಿ–ಸಾಮರ್ಥ್ಯವನ್ನೂ ಚೆನ್ನಾಗಿ ಅರಿತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಈ ರೀತಿಯ ಬೆಳವಣಿಗೆಗಳು ಸಹಜ. ಆದರೆ ನಾನೂ ಕೂಡ ವೈಯಕ್ತಿಕವಾಗಿ ಕೈಲಾದಷ್ಟು ಸೇವೆ ಮಾಡಿದ್ದೇನೆ. ಜನರೊಂದಿಗೆ ನಿಕಟ ಸಂಪರ್ಕ ಹೊಂದಿದ್ದೇನೆ. ಯಾವುದೇ ರೀತಿಯ ಬೆಳವಣಿಗೆಗಳಾದರೂ ಕೂಡ ಜಿಟಿಡಿ ಅವರನ್ನು ಮತ್ತೆ ಆಯ್ಕೆ ಮಾಡುತ್ತಾರೆನ್ನುವುದು ನೂರಕ್ಕೆ ನೂರು ಸತ್ಯ. ಇದು ಜನರ ಗಟ್ಟಿಯಾದ ನಿರ್ಧಾರವಾಗಿದ್ದು, ಯಾವ ಕಾರಣದಿಂದಲೂ ಬದಲಾಗುವುದಿಲ್ಲ ಎಂಬ ವಿಶ್ವಾಸ ನನ್ನಲ್ಲಿದೆ.

ಮಿತ್ರ: *ಸಹಕಾರ ಕ್ಷೇತ್ರದ ಅನುಭವ ರಾಜಕೀಯ ಕ್ಷೇತ್ರಕ್ಕೆ ನೆರವಾಗಲಿದೆಯೇ?*

ಜಿಡಿಹೆಚ್: ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪವಾಗಬಾರದು ಎಂದು ನಾನು ಆರಂಭದಿಂದಲೂ ಹೇಳುತ್ತಿದ್ದೇನೆ. ಇದು ಎಲ್ಲಾ ಸಹಕಾರಿಗಳ ಅಭಿಮತವೂ ಕೂಡ. ಸಹಕಾರ ಕ್ಷೇತ್ರದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ತಲುಪಲು ಸಾಧ್ಯವಿದೆ. ಸದ್ಯ ಸಹಕಾರ ಸಂಘಗಳಿಲ್ಲದ ಕ್ಷೇತ್ರವೇ ಇಲ್ಲ. ಹಾಲು ಉತ್ಪಾದಕರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೀಗೆ ಸಹಕಾರ ಸಂಘಗಳ ಮೂಲಕ ರೈತರು, ಹೈನುಗಾರಿಕೆ ಮಾಡುವವರು ಸೇರಿದಂತೆ ಪ್ರತಿಯೊಬ್ಬರೊಂದಿಗೆ ಸಂಪರ್ಕವಿರುತ್ತದೆ. ರಾಜಕಾರಣಿಯಾಗಬೇಕಾದರೆ ರೈತರು, ಸಾಮಾನ್ಯರ ಬದುಕು, ಅವರ ಕಷ್ಟಸುಖದ ಬಗ್ಗೆ ಅರಿವಿರಬೇಕು. ಇದು ಸಹಕಾರ ಕ್ಷೇತ್ರದ ಮೂಲಕ ಸಾಧ್ಯವಿದೆ. ಹಾಗಾಗಿ ಸಹಕಾರ ಕ್ಷೇತ್ರದ ಸೇವೆ, ಅನುಭವ ರಾಜಕೀಯಕ್ಕೆ ಪೂರಕವಾಗುತ್ತದೆ. ಜನರೊಂದಿಗೆ ಯಾವ ರೀತಿಯಲ್ಲಿ ಬೆರೆಯಬೇಕು, ನಮ್ಮ ಮುಂದಿನ ರೂಪುರೇಷೆಗಳಿಗೆ ಸಹಕಾರಿ ಕ್ಷೇತ್ರ ಸಹಕಾರವಾಗಿದೆ.

ಮಿತ್ರ: *ತಾವು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಬಳಿಕ ಏನೆಲ್ಲಾ ಸುಧಾರಣೆಯಾಗಿದೆ?*

ಜಿಡಿಹೆಚ್: ನಾನು 2013ರಿಂದ 5 ವರ್ಷ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿದ್ದಾಗ ಸಾಕಷ್ಟು ಅನುಭವಗಳಾಗಿದ್ದವು. ಆ ಸಂದರ್ಭದಲ್ಲಿ ಮ್ಯಾನೇಜರ್ ಆಗಿದ್ದವನು ಸುಮಾರು 27 ಕೋಟಿ ರೂ. ಹಗರಣ ಮಾಡಿದ್ದ. ಅದನ್ನು ನಾನೇ ಹೆಕ್ಕಿ ತೆಗೆದು ಹೋರಾಟ ಮಾಡಿದ್ದರ ಫಲವಾಗಿ ತಪ್ಪು ಮಾಡಿದವರಿಗೆ ಶಿಕ್ಷೆಯಾಯಿತು. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಸಹಕಾರಿಗಳು ಒಮ್ಮತದಿಂದ 2018ರಲ್ಲಿ ನನ್ನನ್ನೇ ಅವಿರೋಧವಾಗಿ ಅಧ್ಯಕ್ಷನಾಗಿ ಆಯ್ಕೆ ಮಾಡಿದರು. ಆ ಸಂದರ್ಭದಲ್ಲಿ ಬ್ಯಾಂಕ್ ಅತ್ಯಂತ ಶೋಚನೀಯ ಸ್ಥಿತಿಯಲ್ಲಿತ್ತು. 27 ಕೋಟಿ ಹಗರಣದ ವಿಚಾರ ಗೊತ್ತಾಗುತ್ತಿದ್ದಂತೆ ಭಯದಿಂದ ಅಂದು ಬ್ಯಾಂಕ್‌ನಲ್ಲಿದ್ದ ಒಟ್ಟು 437 ಕೋಟಿ ರೂ. ಠೇವಣಿಯಲ್ಲಿ 100 ಕೋಟಿ ರೂ.ಗಳನ್ನು ಸದಸ್ಯರು ಹಿಂಪಡೆದರು. ಆಗ 337 ಕೋಟಿ ರೂ. ಮಾತ್ರ ಠೇವಣಿ ಉಳಿಯಿತು. ಅದಾಗಲೇ ರೈತರಿಗೆ 450 ಕೋಟಿ ರೂ. ಸಾಲ ನೀಡಲಾಗಿತ್ತು. ಆ ಪರಿಸ್ಥಿತಿಯನ್ನು ನಿಭಾಯಿಸುವುದು ಸವಾಲಾಗಿತ್ತು. ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಭಾರೀ ಹಗರಣವಾಗಿದ್ದು ಅದು ಮುಚ್ಚಿ ಹೋಗುತ್ತದೆ ಎಂದು ರಾಜ್ಯ ಮಟ್ಟದ ಸಭೆಯಲ್ಲೂ ಪ್ರಸ್ತಾಪವಾಗಿತ್ತು. ಆದರೂ ನಾನು, ಬ್ಯಾಂಕ್‌ನ ಆಡಳಿತ ಮಂಡಳಿಯವರು, ಸಿಇಓ, ಸಿಬ್ಬಂದಿ ಎಲ್ಲರೂ ಬ್ಯಾಂಕ್ ಉಳಿವಿಗೆ ಪಣ ತೊಟ್ಟೆವು. ಬ್ಯಾಂಕ್ 1956ರಲ್ಲಿ ಸ್ಥಾಪನೆಯಾಗಿದ್ದು, 2018ರವರೆಗೆ 437 ಕೋಟಿ ರೂ. ಠೇವಣಿ ಹೊಂದಿತ್ತು. 45 ಸಾವಿರ ರೈತರಿಗೆ 450 ಕೋಟಿ ರೂ. ಸಾಲ ವಿತರಿಸಲಾಗಿತ್ತು. ಆದರೆ ನಾನು ಅಧ್ಯಕ್ಷನಾದ ನಂತರ ಕಳೆದ ನಾಲ್ಕೂವರೆ ವರ್ಷದಲ್ಲಿ ಬ್ಯಾಂಕ್ ಠೇವಣಿ ಮೊತ್ತ 900 ಕೋಟಿ ರೂ. ತಲುಪಿದ್ದು, ಮುಂದಿನ ಮಾರ್ಚ್ ವೇಳೆಗೆ ಸಾವಿರ ಕೋಟಿ ತಲುಪುತ್ತದೆ. ಅಲ್ಲದೆ 95 ಸಾವಿರ ರೈತರಿಗೆ 1,350 ಕೋಟಿ ರೂ. ಸಾಲ ವಿತರಣೆ ಮಾಡಿದ್ದೇವೆ. ಮುಚ್ಚುವ ಹಂತ ತಲುಪಿದ್ದ 65 ವರ್ಷಗಳ ಇತಿಹಾಸ ಹೊಂದಿರುವ ಬ್ಯಾಂಕ್ ಅನ್ನು ಸುಸ್ಥಿತಿಗೆ ತಂದಿದ್ದೇವೆ.

ಮಿತ್ರ: *ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರೂ ಆಗಿದ್ದೀರಿ. ಮುಂದಿನ ದಿನಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಮತ್ತಷ್ಟು ಸುಧಾರಣೆ ನಿರೀಕ್ಷಿಸಬಹುದೇ?*

ಜಿಡಿಹೆಚ್: ಖಂಡಿತವಾಗಿ, ಶೋಚನೀಯ ಸ್ಥಿತಿಯಲ್ಲಿದ್ದ ಬ್ಯಾಂಕ್ ಅನ್ನು ನಿರಂತರ ಪರಿಶ್ರಮದಿಂದ ಸುಸ್ಥಿತಿಗೆ ತಂದಿರುವ ಬಗ್ಗೆ ಸಮಾಧಾನವಿದೆ. ಜೊತೆಗೆ ಮತ್ತಷ್ಟು ಗುರಿಗಳೊಂದಿಗೆ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇವೆ. ಸಹಕಾರ ಸಂಸ್ಥೆಗಳು ಉಳಿಯಬೇಕು ಎಂಬುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ಸಂಘಗಳಿಗೆ ಮೂಲ ಸೌಕರ್ಯಗಳು ಕಲ್ಪಿತವಾಗಬೇಕು. ನಮ್ಮ ಬ್ಯಾಂಕ್ ವ್ಯಾಪ್ತಿಯಲ್ಲಿರುವ 275ರಲ್ಲಿ 100 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮಾತ್ರ ಕಟ್ಟಡ ಇನ್ನಿತರ ಮೂಲ ಸೌಕರ್ಯಗಳಿವೆ. ಇದಕ್ಕಾಗಿ ಹಿಂದೆ ತಲಾ 50 ಸಾವಿರ ರೂ.ಗಳಂತೆ ಒಟ್ಟು 50 ಲಕ್ಷ ರೂ. ಅನುದಾನ ಮಾತ್ರ ನೀಡಲಾಗುತ್ತಿತ್ತು. ನಾನು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷನಾಗಿ ವರ್ಷವಾಗಿದೆ. ಈ ಅವಧಿಯಲ್ಲಿ ಅಪೆಕ್ಸ್ ಬ್ಯಾಂಕ್ ಹಾಗೂ ಎಂಸಿಡಿಸಿಸಿ ಸಹಯೋಗದಲ್ಲಿ ಕಟ್ಟಡ ಇನ್ನಿತರ ಸೌಕರ್ಯಕ್ಕಾಗಿ ತಲಾ 10–15 ಲಕ್ಷ ರೂ.ಗಳಂತೆ ಒಟ್ಟು 2 ಕೋಟಿ ರೂ. ಅನುದಾನ ನೀಡಿದ್ದೇವೆ. ಎರಡೂ ಜಿಲ್ಲೆಗಳಲ್ಲಿ ಶೇ.30ರಷ್ಟು ರೈತರನ್ನು ಮಾತ್ರ ತಲುಪಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಶೇ.60–70 ರೈತರನ್ನು ತಲುಪಿ, ಅವರಿಗೆ ಲಭ್ಯವಿರುವ 3 ಲಕ್ಷ ರೂ. ಬಡ್ಡಿ ರಹಿತ ಸಾಲ ಇನ್ನಿತರ ಸೌಲಭ್ಯವನ್ನು ನೀಡಬೇಕೆಂಬ ಗುರಿಯಿದೆ.

ಮಿತ್ರ: *ನಿಮ್ಮ ಬಾಲ್ಯ, ವಿದ್ಯಾಭ್ಯಾಸದ ದಿನಗಳು, ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದ ಬಗ್ಗೆ ತಿಳಿಸುವಿರಾ?*

ಜಿಡಿಹೆಚ್: ನಮ್ಮೂರು ಗುಂಗ್ರಾಲ್‌ಛತ್ರದಲ್ಲೇ ಬಾಲ್ಯ ಕಳೆದಿದ್ದೇನೆ. ಮೈಸೂರಿನ ಸೇಂಟ್ ಜೋಸೆಫ್ ಶಾಲೆಗೆ ಶಾಲಾ ಬಸ್ಸಿನಲ್ಲೇ ಹೋಗಿ ಬರುತ್ತಿದೆ. ಹಾಗಾಗಿ ನನಗೆ ಗ್ರಾಮೀಣ ಜೀವನದ ಬಗ್ಗೆ ಅರಿವಿದೆ. 1993ರಲ್ಲಿ ನಮ್ಮ ಕುಟುಂಬ ಮೈಸೂರಿಗೆ ಸ್ಥಳಾಂತರವಾಯಿತು. ಮರಿಮಲ್ಲಪ್ಪ ಶಾಲೆಯಲ್ಲಿ 8ರಿಂದ 10ನೇ ತರಗತಿ ನಂತರ ಮಹಾಜನ ಕಾಲೇಜಿನಲ್ಲಿ ಪಿಯುಸಿ ಮುಗಿಸಿದೆ. ಬಳಿಕ ಎನ್‌ಐಇ ಕಾಲೇಜಿನಲ್ಲಿ ಬಿಇ(ಸಿವಿಲ್) ಪದವಿ ಮುಗಿಸಿ, ಉನ್ನತ ಶಿಕ್ಷಣಕ್ಕೆ ವಿದೇಶಕ್ಕೂ ತೆರಳಿದ್ದೆ. ಈ ನಡುವೆ ವಿದ್ಯಾಭ್ಯಾಸ ನಂತರ ಉದ್ದಿಮೆ ಸ್ಥಾಪಿಸುವ ಚಿಂತನೆಯಿತ್ತೇ ಹೊರತು ರಾಜಕೀಯಕ್ಕೆ ಬರಬೇಕೆಂದು ಯೋಚನೆಯನ್ನೂ ಮಾಡಿರಲಿಲ್ಲ. ಆದರೆ 2010ರ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಹುಣಸೂರು ತಾಲೂಕು ಹನಗೋಡು ಕ್ಷೇತ್ರದಿಂದ ನನ್ನ ತಾಯಿ ಸ್ಪರ್ಧಿಸಿದ್ದರು. ಆ ವೇಳೆ ಪ್ರಚಾರದಲ್ಲಿ ತೊಡಗುವ ಮೂಲಕ ನಾನು ಅನಿವಾರ್ಯವಾಗಿ ರಾಜಕೀಯಕ್ಕೆ ಬಂದಿದ್ದಾಯ್ತು. ನಂತರ ಸಹಕಾರ ಹಾಗೂ ರಾಜಕೀಯ ರಂಗದ ಮೂಲಕ ಜನರ ಸೇವೆ ಮಾಡುವ ಸದವಕಾಶ ದೊರಕಿತ್ತು, ಈ ಬಗ್ಗೆ ಖುಷಿಯಿದೆ.

ಮಿತ್ರ: *ಯಾರ ಸಹಕಾರವಿದ್ದರೂ ಸ್ವಾಭಿಮಾನದಿಂದ ಮಾತ್ರ ನಿರೀಕ್ಷಿತ ಸಾಧನೆ ಸಾಧ್ಯ ಎನ್ನುವುದಕ್ಕೆ ಜಿ.ಡಿ.ಹರೀಶ್‌ಗೌಡ ಸಾಕ್ಷಿ ಎಂಬ ಜನರ ಅಭಿಪ್ರಾಯಕ್ಕೆ ನಿಮ್ಮ ಪ್ರತಿಕ್ರಿಯೆ ಏನು?*

ಜಿಡಿಹೆಚ್: ನನ್ನನ್ನು ಮನೆ ಮಗನಂತೆ ಕಾಣುವ ಜನರ ಪ್ರೀತಿ, ವಿಶ್ವಾಸಕ್ಕೆ ನಾನೆಂದೂ ಚಿರಋಣಿ. ನಾನೇನು ದೊಡ್ಡ ಸಾಧಕನಲ್ಲ. ಆದರೆ ಯುವ ಸಮುದಾಯ ಕ್ರಿಯಾಶೀಲತೆ ದೇಶದ ಅಭಿವೃದ್ಧಿಗೆ ಸಹಕಾರಿ. ಹಾಗಾಗಿ ಯಾರೂ ನಿರ್ದಿಷ್ಟ ಉದ್ಯೋಗಕ್ಕೆ ಸೀಮಿತವಾಗಬಾರದು. ಸರ್ಕಾರದ ಯೋಜನೆಗಳ ಸದ್ಬಳಕೆಯೊಂದಿಗೆ ಸ್ವ-ಉದ್ಯೋಗದಿಂದ ಸ್ವಾಭಿಮಾನದಿಂದ ಬದುಕುವಂತಾಗಬೇಕು ಎಂಬುದು ನನ್ನ ಅಭಿಪ್ರಾಯ.









Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಮಂಗಳವಾರ 2023

ಸಂಪುಟ: 43 | ಸಂಚಿಕೆ: 283 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಡಿಕೆಶಿ ನಾ ಬಿಡೆನು...

■ ಒಂದೂವರೆ ವರ್ಷದ ನಂತರ ಮತ್ತೆ ಸಿಡಿ ಸಿಡಿತ: ರಮೇಶ್ ಜಾರಕಿಹೊಳಿ ಆಕ್ರೋಶ ■ ಸಿಡಿಗಳ ಮೂಲಕ ರಾಜಕಾರಣಿಗಳು, ಅಧಿಕಾರಿಗಳ ಬ್ಲಾಕ್‌ಮೇಲ್; ಸಿಬಿಐ ತನಿಖೆಗೆ ಆಗ್ರಹ ■ ಬೆಳಗಾವಿ ಗ್ರಾಮೀಣ ಶಾಸಕಿಯೊಂದಿಗೆ ಸೇರಿ ತಮ್ಮನ್ನು ಮುಗಿಸುವ ಷಡ್ಯಂತರ ■ ವಿಷಕನ್ಯೆಯಿಂದ ಕಾಂಗ್ರೆಸ್ ಸರ್ವನಾಶ; ಏನೂ ಇಲ್ಲದ ಡಿಕೆಶಿ ಈಗ ಸಾವಿರಾರು ಕೋಟಿ ಒಡೆಯ ■ ಡಿ.ಕೆ.ಶಿವಕುಮಾರ್ ಮಾತನಾಡಿರುವ ಸಿಡಿ ತುಣುಕು ಬಿಡುಗಡೆ ■ ನನ್ನ ಬಳಿ 120 ಸಾಕ್ಷ್ಯ, 20 ಸಿಡಿಗಳಿವೆ; ಜೈಲಿಗೆ ಕಳಿಸದೇ ಬಿಡೆನು

ಬೆಳಗಾವಿ, ಜ.30–ನನ್ನನ್ನು ಸಿ.ಡಿ. ಮೂಲಕ ಟಾರ್ಗೆಟ್ ಮಾಡಿದ್ದ, ನನ್ನ ವೈಯಕ್ತಿಕ ಜೀವನ ಹಾಳು ಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ನಾನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಶಪಥ ಮಾಡಿದ ಮಾಜಿ ಸಚಿವ ರಮೇಶ್ ಜಾರಕಿಹೊಳಿ, ನನ್ನ ವಿರುದ್ಧ ಷಡ್ಯಂತರ ನಡೆಸಿದ ಡಿ.ಕೆ.ಶಿವಕುಮಾರ್‌ರನ್ನು ಜೈಲಿಗೆ ಕಳುಹಿಸಬೇಕು. ಆ ಪ್ರಕರಣದ ಬಗ್ಗೆ ಸಿಬಿಐ ಸಂಪೂರ್ಣವಾಗಿ ವಿಚಾರಣೆ ಮಾಡಬೇಕು ಎಂದು ಆಗ್ರಹಿಸಿದರು.

ಬೆಳಗಾವಿಯ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಡಿ.ಕೆ. ಶಿವಕುಮಾರ್ ಮಾತನಾಡಿದ್ದಾರೆ ಎನ್ನಲಾದ 18 ಸೆಕೆಂಡ್‌ಗಳ ಆಡಿಯೋ ತುಣುಕು ಬಿಡುಗಡೆ ಮಾಡಿದ್ದಲ್ಲದೇ, ಈ ಮೂಲಕ ಡಿ.ಕೆ.ಶಿವಕುಮಾರ್ ವಿರುದ್ಧ ಒಂದು ಅಸ್ತ್ರವನ್ನು ಬಿಟ್ಟಿದ್ದೇನೆ. ಇದು ಆರಂಭ ಅಷ್ಟೇ. ನನ್ನ ಬಳಿ 120 ಸಾಕ್ಷ್ಯಗಳಿವೆ, 20 ವೀಡಿಯೋಗಳಿವೆ. ಅದ್ಯಾವುದನ್ನೂ ಈಗ ಬಿಡುಗಡೆ ಮಾಡುವುದಿಲ್ಲ. ಅದನ್ನೆಲ್ಲಾ ಸಿಬಿಐನವರಿಗೆ ಕೊಡುತ್ತೇನೆ ಎಂದರು.



ನನ್ನನ್ನು ಹೇಗೆ ಸಮಯ ಕಾಯ್ದು, ಷಡ್ಯಂತರ ಮಾಡಿ ಹೊಡೆದರಲ್ಲಾ, ಹಾಗೆ ನಾನು ಚುನಾವಣೆ ಸಮಯದಲ್ಲಿ ಸುದ್ದಿಗೋಷ್ಠಿ ಮಾಡುತ್ತಿದ್ದೇನೆ. ಇದು ಆರಂಭವಾಗಿದ್ದು, ಡಿಕೆಶಿ ಜೈಲಿಗೆ ಹೋಗುವವರೆಗೂ ಬಿಡುವುದಿಲ್ಲ ಈಗ ಡಿ.ಕೆಶಿವಕುಮಾರ್ ಸಾವಿರಾರು ಕೋಟಿ ಒಡೆಯ. 1985ರಲ್ಲಿ ಅವನು ಮತ್ತು ನಾನು ಒಟ್ಟಿಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಮೂಲಕ ರಾಜಕಾರಣಕ್ಕೆ ಬಂದೆವು. ಇಬ್ಬರೂ ಸೋತೆವು. ಆಗ ಡಿ.ಕೆ.ಶಿವಕುಮಾರ್ ಹರಿದ ಚಪ್ಪಲಿ ಹಾಕಿದ್ದ, ಒಂದು ಹೆಚ್‌ಎಂಟಿ ವಾಚ್ ಕಟ್ಟಿಕೊಂಡಿದ್ದ, ಕೊರಳಿನಲ್ಲಿ ಒಂದು ಬೆಳ್ಳಿ ತಾಯಿತ ಇತ್ತು ಅಷ್ಟೇ. ಆದರೆ ಹಗರಣ ಮಾಡಿ ಭ್ರಷ್ಟಾಚಾರವೆಸಗಿ ಸಾವಿರಾರು ಕೋಟಿ ರೂ. ಮಾಡಿರುವ ಡಿ.ಕೆ. ಶಿವಕುಮಾರ್, ಗಾಜಿನ ಮನೆಯಲ್ಲಿ ಕೂತಿದ್ದಾನೆ ಎಂದರು. ▶ 8ನೇ ಪುಟಕ್ಕೆ

> “ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲು ಕಾಶ್ಮೀರಕ್ಕೆ ಬಂದಿದ್ದೇನೆ. ರಮೇಶ್ ಜಾರಕಿಹೊಳಿ ಸುದ್ದಿಗೋಷ್ಠಿ ಬಗ್ಗೆ ತಿಳಿದಿಲ್ಲ. ಅದರ ಬಗ್ಗೆ ತಿಳಿದು ಮಾತನಾಡುತ್ತೇನೆ. ಈಗ ಇಲ್ಲಿ ಹಿಮ ಸುರಿಯುತ್ತಿದೆ.
>
> 
>
> ವಾತಾವರಣ ತುಂಬಾ ಚೆನ್ನಾಗಿದೆ. ಎಲ್ಲರೂ ಸಂತೋಷವಾಗಿದ್ದೇವೆ.
>
> – ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸಿಡಿ ವಿಚಾರದಲ್ಲಿ ನಾನು ‘ಎಲ್ ಬೋರ್ಡ್’

ಮೈಸೂರು, ಜ.30(ಜಿಎ) –ಸಿಡಿ ವಿಚಾರದಲ್ಲಿ ನಾನು ಎಲ್ ಬೋರ್ಡ್ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು. ಶಾಸಕ ರಮೇಶ ಜಾರಕಿಹೊಳಿ ಅವರು ಡಿ.ಕೆ. ಶಿವಕುಮಾರ್ ಕುರಿತಾದ ಆಡಿಯೊ ಬಿಡುಗಡೆ ಕುರಿತು ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ಧಗಂಗಾ ಶ್ರೀಗಳು, ಚುಂಚನಗಿರಿ ▶ 8ನೇ ಪುಟಕ್ಕೆ



ಚುನಾವಣೆ ವೇಳೆ ಷಡ್ಯಂತ್ರ

ನಾನು ಬಾಂಬೆ ರೆಸಾರ್ಟ್‌ನಲ್ಲಿದ್ದೆ. ಆಗ ವಿಧಾನಸಭೆಯಲ್ಲಿ ಗ್ರಾಮೀಣ ಶಾಸಕಿ (ಲಕ್ಷ್ಮೀ ಹೆಬ್ಬಾಳ್ಕರ್) ತನ್ನನ್ನು ಕಿತ್ತೂರು ರಾಣಿ ಚೆನ್ನಮ್ಮನಿಗೆ ಹೋಲಿಸಿಕೊಂಡು ಮಾತನಾಡಿದ್ದರು. ಆ ಸಂದರ್ಭದಲ್ಲಿ ಟಿವಿಯೊಂದಕ್ಕೆ ಸಂದರ್ಶನ ನೀಡುತ್ತಿದ್ದ ನನಗೆ ಲಿಂಗಾಯತ ಮುಖಂಡರೊಬ್ಬರ ಕರೆ ಬಂತು. ಅವರು ಈಕೆ (ಲಕ್ಷ್ಮೀ ಹೆಬ್ಬಾಳ್ಕರ್) ತನ್ನನ್ನು ಕಿತ್ತೂರು ರಾಣಿ ಚೆನ್ನಮ್ಮ ಎಂದು ಹೇಳಿಕೊಳ್ಳುತ್ತಿದ್ದಾಳೆ. ನೀವೆಲ್ಲಾ ಸುಮ್ಮನಿದ್ದೀರಿ ಎಂದರು. ಆಗ ನಾನು ಬಹಿರಂಗವಾಗಿ ಹೇಳಲಾಗದಂತಹ ಕೆಟ್ಟ ಪದವೊಂದನ್ನು ಬಳಸಿದ್ದೆ. ಈಗ ಆ ಆಡಿಯೋವನ್ನು ಎಡಿಟ್ ಮಾಡಿ ಕಿತ್ತೂರು ಚೆನ್ನಮ್ಮನಿಗೆ ನಾನು ಅವಹೇಳನ ಮಾಡಿದ್ದೇನೆ ಎಂಬಂತೆ ಬಿಂಬಿಸಿ ಚುನಾವಣಾ ವೇಳೆಯಲ್ಲಿ ಆಡಿಯೋ ರಿಲೀಸ್ ಮಾಡಲು ಷಡ್ಯಂತರ ನಡೆದಿದೆ. ಹಾಗೇನಾದರೂ ನಡೆದು ಜಾತಿ ಸಂಘರ್ಷ ಉಂಟಾದರೆ ಅದಕ್ಕೆ ಡಿ.ಕೆ.ಶಿವಕುಮಾರ್ ಮತ್ತು ಗ್ರಾಮೀಣ ಶಾಸಕಿಯೇ ನೇರ ಹೊಣೆಗಾರರಾಗುತ್ತಾರೆ ಎಂದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ

ಫೆ.15ರಿಂದ ಮೊದಲ ಹಂತದ ಟೋಲ್ ಸಂಗ್ರಹ

ಪ್ರಯಾಣಿಕರ ಸ್ನೇಹಿ ಮಾಹಿತಿ ಸೂಚನಾ ಫಲಕ ಅಳವಡಿಸುವ ಪ್ರಕ್ರಿಯೆ ಆರಂಭ



ಮೈಸೂರು, ಜ. 30 (ಆರ್‌ಕೆ)–ಮೈಸೂರು–ಬೆಂಗಳೂರು 10 ಪಥದ ರಾಷ್ಟ್ರೀಯ ಹೆದ್ದಾರಿಯ ಮೊದಲ ಹಂತದ ಟೋಲ್ ಸಂಗ್ರಹ ಫೆ. 15 ರಿಂದ ಆರಂಭವಾಗಲಿದೆ.

ಎರಡು ಹಂತಗಳಲ್ಲಿ ಈ ಎಕ್ಸ್‌ಪ್ರೆಸ್‌ವೇ ಕಾಮಗಾರಿ ನಡೆದಿದ್ದು, ಬೆಂಗಳೂರು–ನಿಡಘಟ್ಟ ನಡುವೆ ಮೊದಲ ಹಂತದ ಟೋಲ್‌ನಲ್ಲಿ ಫೆ.15ರಿಂದ ಶುಲ್ಕ ಸಂಗ್ರಹಿಸಲಾಗುವುದು. ನಂತರ ಎರಡನೇ ಹಂತದ ನಿಡಘಟ್ಟ–ಮೈಸೂರು ನಡುವಿನ ಶ್ರೀರಂಗಪಟ್ಟಣ ತಾಲೂಕು ಗಣಂಗೂರು ಮತ್ತು ಕೋಡಿಶೆಟ್ಟಿಪುರ ಗ್ರಾಮದ ನಡುವೆ ನಿರ್ಮಿಸಿರುವ ಟೋಲ್‌ನಿಂದ ಶುಲ್ಕ ವಸೂಲಿ ಮಾಡಲಾಗುವುದು ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ. ಬೆಂಗಳೂರು–ನಿಡಘಟ್ಟ ನಡುವೆ 56 ಕಿ.ಮೀ. ಅಂತರದಲ್ಲಿನ ಟೋಲ್ ಫೆ. 15 ರಿಂದ ಆರಂಭವಾಗುವುದರಿಂದ ಅಲ್ಲಿ ಪ್ರಯಾಣಿಕರ ಸ್ನೇಹಿ ಮಾಹಿತಿ ಹಾಗೂ ಸೂಚನಾ ಫಲಕ ಅಳವಡಿಸುವ ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಖದೀಮರ ಹಾವಳಿ: ವಿದ್ಯುತ್ ಕಂಬಗಳ ಕಬ್ಬಿಣದ ಪಟ್ಟಿ ಕಳವು


ಕಾದಿದೆ ವಾಹನ ಸವಾರರಿಗೆ ಕಂಟಕ

ಮೈಸೂರು, ಜ.30(ವಿನಯ್ ಕಾರೇಕುರ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಇನ್ನೇನು ಉದ್ಘಾಟನೆಗೆ ಸಿದ್ಧವಾಗಿದೆ. ಈಗಾಗಲೇ ಹಲವೆಡೆ ಈ ಹೊಸ ಹೆದ್ದಾರಿಯಲ್ಲಿ ವಾಹನಗಳು ಸಂಚರಿಸುತ್ತಿವೆ. ಆದರೆ ಖದೀಮರ ಕಾಟ ಇದೀಗ ಹೆದ್ದಾರಿಯಲ್ಲಿ ಸಂಚರಿಸುವವರಿಗೆ ಕಂಟಕವಾಗಿ ಪರಿಣಮಿಸಿದೆ. ಈ ಕಳ್ಳರ ಕಾಟದಿಂದ ಹೆದ್ದಾರಿ ಬದಿಯಲ್ಲಿ ನಿರ್ಮಿಸಿರುವ ಭಾರೀ ಎತ್ತರದ ವಿದ್ಯುತ್ ಕಂಬಗಳು ವಾಲಿ ರಸ್ತೆಗೆ ಉರುಳುವ ಆತಂಕ ಎದುರಾಗಿದ್ದು, ಭಾರೀ ಅಪಾಯ ಸಂಭವಿಸುವ ▶ 8ನೇ ಪುಟಕ್ಕೆ

ಬಜೆಟ್‌ನಲ್ಲಿ ಎಲ್ಲಾ ವರ್ಗಕ್ಕೂ ಆದ್ಯತೆ

● ಸಿಎಂ ಬಸವರಾಜ ಬೊಮ್ಮಾಯಿ ಭರವಸೆ ● ಹುತಾತ್ಮರ ಸ್ಮರಣೆ ಅಂಗವಾಗಿ ಮಹಾತ್ಮರಿಗೆ ನಮನ

ಬೆಂಗಳೂರು, ಜ.30(ಕೆಎಂಶಿ)–ಮುಂದಿನ ಆಯವ್ಯಯದಲ್ಲಿ



ದುಡಿಯುವ ವರ್ಗಕ್ಕೆ ಸೇರಿದಂತೆ ಎಲ್ಲ ವರ್ಗದವರಿಗೂ ಆದ್ಯತೆ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದವರ ಸ್ಮರಣಾರ್ಥ ವಿಧಾನಸೌಧ ಮತ್ತು ವಿಕಾಸಸೌಧದ ನಡುವಿನ ಮಹಾತ್ಮಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಎರಡು ನಿಮಿಷಗಳ ಮೌನಾಚರಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ರೈತರು, ಮಹಿಳೆಯರು, ಕಾರ್ಮಿಕರು ಎಲ್ಲರಿಗೂ, ವಿಶೇಷವಾಗಿ ದುಡಿಯುವ ವರ್ಗಕ್ಕೆ ಆದ್ಯತೆ ನೀಡಲಾಗುತ್ತದೆ. ಆರ್ಥಿಕವಾಗಿ ಅವರನ್ನು ಮೇಲೆತ್ತುವ ಕೆಲಸ ಪ್ರಾಥಮಿಕವಾಗಿ ಆಗಬೇಕು. ಆ ನಿಟ್ಟಿನಲ್ಲಿ ಕಾರ್ಯಕ್ರಮಗಳು ಇರಲಿವೆ ಎಂದರು. ಮಹಾತ್ಮಗಾಂಧೀಜಿಯವರು ಹುತಾತ್ಮರಾದ ಈ ದಿನದ ಬಗ್ಗೆ ನಾವು ಚಿಂತನೆ ಮಾಡಿ ಆತ್ಮಾವಲೋಕನ ಮಾಡಿಕೊಂಡು ಗಾಂಧೀಜಿಯವರ ಮಾರ್ಗದಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನ ಮಾಡುವ ಸಂಕಲ್ಪವನ್ನು ಮಾಡಬೇಕು.

ಮಹಾತ್ಮಗಾಂಧಿ ಅವರು ಹೇಳಿರುವಂತೆ ಅವರ ಜೀವನವೇ ಒಂದು ಸಂದೇಶ. ಅವರ ಜೀವನವನ್ನು ಓದಿ, ತಿಳಿದುಕೊಂಡು, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ. ಅವರ ಜೀವನದ ಆಧಾರ ನೈತಿಕತೆ ಮತ್ತು ಸತ್ಯ. ▶ 8ನೇ ಪುಟಕ್ಕೆ

Promotional Feature

ಶೀಘ್ರ ಕಾಲದಲ್ಲಿ ಮೈಸೂರಲ್ಲಿ ಮನೆ ಮಾತಾಗಿರುವ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ವರ್ಷದ ಸಂಭ್ರಮ

೫೦೦ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆ... ೩೦ಕ್ಕೂ ಉಚಿತ ಶಿಬಿರ...

2022ರ ಜನವರಿ 30ರಂದು ಆರಂಭಗೊಂಡ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 500ಕ್ಕೂ ಹೆಚ್ಚು ನಾನಾ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. 5 ಸಾವಿರಕ್ಕೂ ಹೆಚ್ಚು ಒಳ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆ ಹಲವು ಗ್ರಾಮೀಣ ಪ್ರದೇಶಗಳು ಸೇರಿದಂತೆ ಕಳೆದೊಂದು ವರ್ಷದಲ್ಲಿ 30ಕ್ಕೂ ಹೆಚ್ಚು ಉಚಿತ ತಪಾಸಣಾ ಶಿಬಿರಗಳನ್ನು ಆಯೋಜಿಸುವ ಮೂಲಕ ಗ್ರಾಮೀಣ ಜನರ ಆರೋಗ್ಯ ಕಾಳಜಿ ವಹಿಸಲಾಗಿದೆ.





ಸರ್ಕಾರದ ಯೋಜನೆ, ಖಾಸಗಿ ಇನ್ಸೂರೆನ್ಸ್ ಕಂಪನಿಗಳೊಂದಿಗೆ ಒಡಂಬಡಿಕೆ...

'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡ್, ಇಎಸ್‌ಐ, ಯಶಸ್ವಿನಿ ಯೋಜನೆ ಸೇರಿದಂತೆ ರಾಜ್ಯ, ಕೇಂದ್ರ ಸರ್ಕಾರದ ಯೋಜನೆಗಳ ಜೊತೆಗೆ 20ಕ್ಕೂ ಇನ್ಸೂರೆನ್ಸ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇನ್ಸೂರೆನ್ಸ್ ಇದ್ದವರು ಖರ್ಚಿನ ಚಿಂತೆ ಇಲ್ಲದೆ ಚಿಕಿತ್ಸೆ ಪಡೆದುಕೊಳ್ಳಬಹುದು.

ಒಂದು ವರ್ಷದ ಸಾರ್ಥಕ ಸೇವೆ ಮುಂದುವರೆಯಲಿದೆ....

"ಎಲ್ಲಾ ವರ್ಗದ ಜನರಿಗೂ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ನೀಡುವ ಮೂಲಕ ಒಂದು ವರ್ಷ ಪೂರೈಸಿದ್ದೇವೆ. ಚಿಕಿತ್ಸೆ ಪಡೆದು ಗುಣಮುಖರಾದವರೇ ತಮ್ಮ ನೆರೆ-ಹೊರೆಯವರಿಗೆ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸಾ ಸೌಲಭ್ಯವಿದೆ ಎಂದು ಹೇಳಿ ಕಳುಹಿಸುವ ಮಟ್ಟಕ್ಕೆ ಸೇವೆ ನೀಡಿದ್ದೇವೆ. ಈ ಸಾರ್ಥಕ ಸೇವೆ ಇದೇ ರೀತಿ ಮುಂದುವರೆಯಲಿದೆ ಎಂದು 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್ ಹರ್ಷ ವ್ಯಕ್ತಪಡಿಸಿದರು. ಆಸ್ಪತೆಗೆ ಶ್ರೀಮಂತರೇ ಬರಲಿ ಬಡವರೇ ಬರಲಿ ಒಂದೇ ರೀತಿಯ ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದೇವೆ. ಎಲ್ಲಾ ಬಗೆಯ ಸೌಕರ್ಯಗಳನ್ನೂ ಕಲ್ಪಿಸಲಾಗಿದ್ದು, ಲಾಭ ಮಾಡಬೇಕು ಎಂಬುದಕ್ಕಿಂತ ಸೇವೆ ಮಾಡಬೇಕು ಎಂಬ ಉದ್ದೇಶದಿಂದ ಆಸ್ಪತ್ರೆ ನಡೆಸುತ್ತಿದ್ದೇವೆ. ಕಳೆದೊಂದು ವರ್ಷದಲ್ಲಿ ಸಾಕಷ್ಟು ಅಡೆತಡೆಗಳು ಬಂದರು ಯಾವುದಕ್ಕೂ ಜಗ್ಗದೆ ಯಶಸ್ವಿಯಾಗಿ ವೈದ್ಯಕೀಯ ಸೇವೆ ನೀಡಿದ್ದೇವೆ. ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳ ನಡುವಿನ ಹೊಂದಾಣಿಕೆಯ ಪ್ರತಿಫಲದಿಂದಾಗಿ ಯಾವುದೇ ತೊಂದರೆಯೂ ಇಲ್ಲದೆ ಒಂದು ವರ್ಷ ಪೂರೈಸಿದ್ದೇವೆ ಎಂದು ಹೇಳಿದರು.

ಡಾ.ಪುನೀತ್ ಹೆಸರಿನಲ್ಲಿ ರಿಯಾಯಿತಿ...



ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ಶೇ.10 ರಷ್ಟು ರಿಯಾಯಿತಿ ನೀಡುವ ಮೂಲಕ ಬಡರೋಗಿಗಳಿಗೂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಅವಕಾಶವನ್ನು 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೀಡಲಾಗಿದೆ. ಇದುವರೆಗೂ ಸಾಕಷ್ಟು ಮಂದಿ ಶೇ.10 ರಿಯಾಯಿತಿ ಸೌಲಭ್ಯ ಪಡೆದುಕೊಂಡಿದ್ದು, ರಿಯಾಯಿತಿ ಸೌಲಭ್ಯವನ್ನು ಮುಂದುವರೆಸುವ ಚಿಂತನೆಯನ್ನು ನಡೆಸಲಾಗಿದೆ.

ದಿನದ 24 ಗಂಟೆಯೂ ಸೇವೆ...




ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಸಮೀಪದಲ್ಲಿರುವ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಿನದ 24 ಗಂಟೆಯೂ ಚಿಕಿತ್ಸಾ ಸೌಲಭ್ಯ ನೀಡಲಾಗುವುದು. ತುರ್ತು ಸೇವೆ, ಡೇ ಕೇರ್ ಸೇವೆಗಳು, 24X7 ಔಷಧಿ, ಲ್ಯಾಬ್ ಸೇವೆ, ರೇಡಿಯಾಲಜಿ, ಕಂಪ್ಯೂಟರೈಸ್ಡ್ ರೇಡಿಯಾಗ್ರಫಿ ಸಿಸ್ಟಮ್, ಅಲ್ಟ್ರಾಸೌಂಡ್, ಕಲರ್ ಡಾಪ್ಲರ್, 2ಡಿ ಡಕೋ, ಸರ್ಜಿಕಲ್ ಐಸಿಯು, ಮೆಡಿಕಲ್ ಐಸಿಯು, ಎಚ್‌ಡಿಯು, ಮಾಡ್ಯುಲರ್ ಆಪರೇಷನ್ ಥಿಯೇಟರ್, ಕಾರ್ಪೋರೇಟ್ ಮತ್ತು ಫ್ಯಾಮಿಲಿ ಹೆಲ್ತ್ ಪ್ಯಾಕೇಜ್‌ಗಳು, ನವಜಾತ ಶಿಶುಗಳ ಶೀಘ್ರ ನಿಗಾ ಘಟಕ, ಕೊಲೊನೋ-ಸ್ಕೋಪಿ, ಪೌಷ್ಟಿಕತೆ ಹಾಗೂ ಎಲ್ಲಾ ಬಗೆಯ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ಆಸ್ಪತ್ರೆಯಲ್ಲಿ 150 ಹಾಸಿಗೆಗಳಿದ್ದು, ಅವುಗಳಲ್ಲಿ 65 ಐಸಿಯು ಬೆಡ್‌ಗಳಿವೆ. ಅಗತ್ಯ ಮಾಹಿತಿಗಾಗಿ ದೂ.ಸಂ.0821-2371000, ಮೊ.ನಂ.9512210100/9513310102ಗೆ ಸಂಪರ್ಕಿಸಬಹುದಾಗಿದೆ.

ಅತ್ಯಾಧುನಿಕ ಸೌಲಭ್ಯ, ಚಿಕಿತ್ಸೆ...

"'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯೂ ಬೇರೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಿಗಿಂತ ಅತ್ಯಾಧುನಿಕ ಸೇವೆಯನ್ನು ಕಡಿಮೆ ಖರ್ಚಿನಲ್ಲಿ ನೀಡುತ್ತಿದೆ. ಇದುವರೆಗೂ ನಡೆಸಿರುವ ಶಸ್ತ್ರಚಿಕಿತ್ಸೆಗಳೆಲ್ಲವೂ ಯಶಸ್ವಿಯಾಗಿವೆ. ಬೇರೆ ಆಸ್ಪತ್ರೆಗಳಲ್ಲಿ ಮಂಡಿ ಚಿಪ್ಪಿನ ಬದಲಾವಣೆಗೆ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಶುಲ್ಕ ಕಟ್ಟಿಸಿಕೊಳ್ಳಲಾಗುತ್ತದೆ. ಆದರೆ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 1.50 ಲಕ್ಷಕ್ಕೆ ಮಂಡಿ ಚಿಪ್ಪಿನ ಬದಲಾವಣೆ ಜೊತೆಗೆ ಶೀಘ್ರ ಗುಣಮುಖರಾಗುವಂತೆ ಗುಣಮಟ್ಟದ ಚಿಕಿತ್ಸೆ ನೀಡಲಾಗುವುದು. ನಾರ್ಮಲ್ ಹೆರಿಗೆಗೆ ಸುಮಾರು 15 ಸಾವಿರ ಶುಲ್ಕ ಹಾಗೂ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡುವುದಕ್ಕೆ 50 ಸಾವಿರ ರೂ. ಶುಲ್ಕ ಕಟ್ಟಿಸಿಕೊಳ್ಳಲಾಗುವುದು. ಇದು ಬೇರೆ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದರೆ ತುಂಬಾ ಕಡಿಮೆ ಶುಲ್ಕವಾಗಿದೆ. ಮುಂದಿನ ದಿನಗಳಲ್ಲಿ ಹೃದಯಕ್ಕೆ ಸಂಬಂಧಿಸಿದ ಚಿಕಿತ್ಸೆ ನೀಡುವುದಕ್ಕೆ ಎಲ್ಲಾ ಬಗೆಯ ವೈದ್ಯಕೀಯ ಸಲಕರಣೆಗಳು ಹಾಗೂ ನುರಿತ ವೈದ್ಯರನ್ನು ನೇಮಕ ಮಾಡಿಕೊಳ್ಳುವುದು ಗುರಿಯಾಗಿದೆ.

– ಕೆ.ಬಿ.ಕುಮಾರ್, ಮುಖ್ಯಸ್ಥರು, 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ





ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಸಮೀಪದಲ್ಲಿರುವ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಪ್ರಥಮ ವರ್ಷದ ವಾರ್ಷಿಕೋತ್ಸವವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಯೋಗನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರೂ ಆದ ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಭಾಷ್ಯಂ ಸ್ವಾಮೀಜಿ, ಶ್ರೀನಿವಾಸ್ ಸ್ವಾಮೀಜಿ, ಶೇಷಾದ್ರಿ ಸ್ವಾಮೀಜಿ, 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಕೆ.ಬಿ.ಕುಮಾರ್, ಅವರ ಪತ್ನಿ ಶ್ರೀಮತಿ ಗೀತಾ ಕುಮಾರ್, ಪುತ್ರಿಯರಾದ ನಯನ, ಶಿವಾನಿ ಹಾಗೂ ಕುಟುಂಬಸ್ಥರು, ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿ, ಸ್ನೇಹಿತರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಅಲ್ಪಕಾಲದಲ್ಲೇ ಮನೆ ಮಾತಾಗಿರುವ, ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳುಳ್ಳ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಪ್ರಥಮ ವರ್ಷದ ವಾರ್ಷಿಕೋತ್ಸವ ಅರ್ಥಪೂರ್ಣವಾಗಿ ಸೋಮವಾರ ನೆರವೇರಿತು.

ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರದೊಂದಿಗೆ ಅತ್ಯಾಕರ್ಷಕವಾಗಿ ಸಿಂಗಾರಗೊಂಡಿದ್ದ ವೇದಿಕೆಯಲ್ಲಿ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರೂ ಆದ ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಭಾಷ್ಯಂ ಸ್ವಾಮೀಜಿ, ದೀಪ ಬೆಳಗಿಸಿ ಕೇಕ್ ಕತ್ತರಿಸುವ ಮೂಲಕ ಮೊದಲ ವರ್ಷದ ಸಾರ್ಥಕ ಸೇವೆಗೆ ಅಭಿನಂದನೆ ಸಲ್ಲಿಸಿದರಲ್ಲದೆ ಪ್ರೀತಿ, ಒಲವು, ಸತ್ಕಾರದಿಂದ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಜನಮಾನಸಗೊಳ್ಳಲಿ ಎಂದು ಆಶಿಸಿದರು.



ಹೃದಯ ವೈಶಾಲ್ಯತೆಯುಳ್ಳ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್, ವಿದ್ಯಾಕ್ಷೇತ್ರದ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲೂ ಸೇವೆ ಸಲ್ಲಿಸುವ ಮೂಲಕ ಸಾಮಾಜಿಕ ಸೇವೆ ತಮ್ಮನ್ನು ಮುಡಿಪಾಗಿಸಿಕೊಂಡಿದ್ದಾರೆ. ನಟ ಶಿವರಾಜ್‌ಕುಮಾರ್ ಅವರಿಂದ ಉದ್ಘಾಟನೆಗೊಂಡು, ಡಾ.ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ಶೇ.10ರಷ್ಟು ರಿಯಾಯಿತಿ ನೀಡುವುದರ ಮೂಲಕ ಆರಂಭಗೊಂಡ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಇಂದು ಒಂದು ವರ್ಷ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಆರಂಭಗೊಂಡಾಗಿನಿಂದಲೂ ಸಾಕಷ್ಟು ಬಾರಿ ಭೇಟಿ ನೀಡಿದ್ದೇನೆ. ತಜ್ಞ ವೈದ್ಯರ ಸೌಲಭ್ಯ, ಸುಂದರ ಪರಿಸರ, ವಿಶ್ವಾಸದ ಸೇವೆ ಮೂಲಕ ಆಸ್ಪತ್ರೆ ಬೆಳೆಯುತ್ತಿದೆ. ಸಾಂಸ್ಕೃತಿಕ ನಗರ, ಅರಮನೆ ನಗರ, ಯೋಗ ನಗರ ಎಂತೆಲ್ಲಾ ಪ್ರಖ್ಯಾತಿ ಪಡೆದಿರುವ ಮೈಸೂರಿನಲ್ಲಿ ಅದರಲ್ಲೂ 'ನಯನ ಕುಮಾರ್ಸ್' ಎಂಬ ಹೆಸರಿನ ಈ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಗುಣಮಟ್ಟದ ವೈದ್ಯಕೀಯ ಸೇವೆ ಮೂಲಕ ಉತ್ತುಂಗಕ್ಕೇರಲಿ ಎಂದು ಶುಭಕೋರಿದರು.


ಸಲಹೆ ನೀಡಿದ್ದೆ: ಈ ಆಸ್ಪತ್ರೆಗೆ ಯಾವ ಹೆಸರಿಡಬೇಕು ಎಂದು ಕುಮಾರ್ ನನ್ನನ್ನು ಕೇಳಿದಾಗ 'ನಯನ ಕುಮಾರ್ಸ್' ಎಂದು ಹೆಸರಿಡುವಂತೆ ಸಲಹೆ ನೀಡಿದ್ದೆ. ಕುಮಾರ್ ಅವರ ಮಗಳ ಹೆಸರು ನಯನ. ನಯನ ಎಂದರೆ ಪಂಚೇಂದ್ರಿಯಗಳಲ್ಲೇ ಶ್ರೇಷ್ಠವಾದ ಕಣ್ಣು. ಚಿಕಿತ್ಸೆಗೆ ಬರುವ ರೋಗಿಗಳ ಜೀವನಕ್ಕೆ ಈ ಆಸ್ಪತ್ರೆ ಕಣ್ಣಾಗಲಿ ಎಂಬ ಆಶಯದಿಂದ 'ನಯನ ಕುಮಾರ್ಸ್' ಎಂದು ಹೆಸರಿಡುವಂತೆ ತಿಳಿಸಿದ್ದೆ. ಹೆಸರಿಗೆ ತಕ್ಕಂತೆ ಆಸ್ಪತ್ರೆಯು ಎಲ್ಲಾ ವರ್ಗದ ಜನರಿಗೆ ಉತ್ತಮ ಸೇವೆ ನೀಡುತ್ತಿದ್ದು, ಪ್ರೀತಿ, ಒಲವು ಮತ್ತು ಸತ್ಕಾರದೊಂದಿಗೆ ಬೆಳೆಯಲಿ ಎಂದರಲ್ಲದೆ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್, ಅವರ ಪತ್ನಿ ಶ್ರೀಮತಿ ಗೀತಾ ಕುಮಾರ್, ಪುತ್ರಿಯರಾದ ನಯನ, ಶಿವಾನಿ ಸೇರಿದಂತೆ ಕುಟುಂಬಸ್ಥರನ್ನು ಆಶೀರ್ವದಿಸಿದರು. ಯೋಗ ನರಸಿಂಹಸ್ವಾಮಿ ದೇವಸ್ಥಾನದ ಶ್ರೀನಿವಾಸ್ ಸ್ವಾಮೀಜಿ, ಶೇಷಾದ್ರಿ ಸ್ವಾಮೀಜಿ, ಜಿಲ್ಲಾ ಸರ್ಜನ್ ಡಾ.ಅಮರ್‌ನಾಥ್, 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ, ಕುಟುಂಬಸ್ಥರು, ಸ್ನೇಹಿತರು ಉಪಸ್ಥಿತರಿದ್ದರು.



2022ರ ಜನವರಿ 30ರಂದು ಖ್ಯಾತ ಚಲನಚಿತ್ರ ನಟ ಡಾ. ಶಿವರಾಜ್‌ಕುಮಾರ್ ಅವರು 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿದ್ದರು. ಶಾಸಕ ಜಿ.ಟಿ.ದೇವೇಗೌಡ, ಆಸ್ಪತ್ರೆ ಮುಖ್ಯಸ್ಥ ಕೆ.ಬಿ.ಕುಮಾರ್, ಶ್ರೀಮತಿ ಗೀತಾ ಕುಮಾರ್ ಸೇರಿದಂತೆ ಹಲವಾರು ಗಣ್ಯರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಭಾಷ್ಯಂ ಸ್ವಾಮೀಜಿ, ಜಿಟಿಡಿ ಸ್ಮರಣೆ....

ಒಂದು ವರ್ಷ ಪೂರೈಸಿದ ಸಂಭ್ರಮದಲ್ಲಿರುವ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಕೆ.ಬಿ.ಕುಮಾರ್, ತಮಗೆ ಸಹಕಾರ, ಪ್ರೋತ್ಸಾಹ ನೀಡಿ ಧೈರ್ಯ ತುಂಬಿದ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರೂ ಆದ ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಸ್ಮರಿಸಿದರು. ಆಸ್ಪತ್ರೆ ಕಟ್ಟಡ ನಿರ್ಮಾಣದಿಂದ ಹಿಡಿದು ಉದ್ಘಾಟನೆ, ನಂತರ ಒಂದು ವರ್ಷದ ಸಾರ್ಥಕ ಸೇವೆ ಎಲ್ಲದಕ್ಕೂ ಜಿ.ಟಿ.ದೇವೇಗೌಡರು ಹಾಗೂ ಭಾಷ್ಯಂ ಸ್ವಾಮೀಜಿಯವರು ನೀಡಿದ ಸಹಕಾರ ಎಂದಿಗೂ ಮರೆಯುವಂತದಲ್ಲ. ಹಾಗೆಯೇ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಆಸ್ಪತ್ರೆಯ ಯಶಸ್ಸಿಗೆ ಸಹಕರಿಸಿ, ಪ್ರೋತ್ಸಾಹ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸಿದರು.



ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಐದು ಕ್ಲಿನಿಕ್‌ಗಳು ಆರಂಭ....

'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 5 ಕ್ಲಿನಿಕ್‌ಗಳನ್ನು ತೆರೆಯಲಾಗುತ್ತಿದೆ. ಈಗಾಗಲೇ ಇಲವಾಲ, ಜಯಪುರದಲ್ಲಿ ಕ್ಲಿನಿಕ್ ತೆರೆಯಲಾಗಿದ್ದು, ಹೆಚ್.ಡಿ.ಕೋಟೆ, ಜಯಪುರ, ಹಾಗೂ 'ನಯನ ಕುಮಾರ್ಸ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್ ಹುಟ್ಟೂರಾದ ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಕೆ.ಬೆಟ್ಟಹಳ್ಳಿಯಲ್ಲಿ ಕ್ಲಿನಿಕ್ ತೆರೆಯಲು ಸಿದ್ಧತೆ ನಡೆಸಲಾಗಿದೆ.


ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೇರಿ ಸಂಕೀರ್ಣ, ಆಲನಹಳ್ಳಿ, ಮೈಸೂರು-570028
ನಂದಿನಿ
ಮೈಮುಲ್
ಶ್ರೀ ಜಿ.ಡಿ. ಹರೀಶ್‌ಗೌಡ ರವರಿಗೆ 38ನೇ
ಜನ್ಮ ದಿನದ ಹಾರ್ದಿಕ ಶುಭಾಶಯಗಳು
ಶ್ರೀ ಪಿ.ಎಂ. ಪ್ರಸನ್ನ ರವರು
ಅಧ್ಯಕ್ಷರು, ಮೈಮುಲ್
ಶ್ರೀ ಜಿ.ಡಿ. ಹರೀಶ್‌ಗೌಡ
ಮಾನ್ಯ ಉಪಾಧ್ಯಕ್ಷರು ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮೈಸೂರು
ಶ್ರೀ ಎ.ಟಿ. ಸೋಮಶೇಖರ್ ನಿರ್ದೇಶಕರು
ಶ್ರೀ ಕೆ.ಜಿ. ಮಹೇಶ್ ನಿರ್ದೇಶಕರು
ಶ್ರೀ ಕೆ. ಈರೇಗೌಡ ನಿರ್ದೇಶಕರು
ಶ್ರೀ ಕೆ.ಎಸ್. ಕುಮಾರ್ ನಿರ್ದೇಶಕರು
ಶ್ರೀ ಓಂಪ್ರಕಾಶ್ ನಿರ್ದೇಶಕರು
ಶ್ರೀ ಕೆ. ಉಮಾಶಂಕರ್ ನಿರ್ದೇಶಕರು
ಶ್ರೀ ಹೆಚ್.ಪಿ. ರಾಜೇಂದ್ರ ನಿರ್ದೇಶಕರು
ಶ್ರೀ ಆರ್. ಚೆಲುವರಾಜ್ ನಿರ್ದೇಶಕರು
ಶ್ರೀ ಬಿ.ಎನ್. ಸದಾನಂದ ನಿರ್ದೇಶಕರು
ಶ್ರೀ ಎಸ್.ಸಿ. ಅಶೋಕ್ ನಾಮ ನಿರ್ದೇಶಕರು
ಶ್ರೀ ಹೆಚ್.ಎಸ್. ಮಂಜುನಾಥ್
ಶುಭಾಶಯಕೋರುವವರು :
ಒಕ್ಕೂಟದ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿಗಳು


ಶ್ರೀ ಜಿ.ಡಿ. ಹರೀಶ್ ಗೌಡ
ರವರಿಗೆ
ಜನ್ಮದಿನದ ಶುಭಾಶಯಗಳು

ಮೈಸೂರು ಮಿತ್ರ

ಕೆ.ಜಿ.ಕೊಪ್ಪಲು ವೃತ್ತ ಅಭಿವೃದ್ಧಿಗೆ ಶಂಕುಸ್ಥಾಪನೆ



ಮೈಸೂರು ಕೆ.ಜಿ.ಕೊಪ್ಪಲು ವೃತ್ತದಲ್ಲಿ ಎಸ್‌ಎಫ್‌ಸಿ ವಿಶೇಷ ಅನುದಾನದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ವೃತ್ತ (ಜಯನಗರ ರೈಲ್ವೆ ಅಂಡರ್ ಪಾಸ್)ದಲ್ಲಿ ಸುಮಾರು 1.6 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖಂಡರಾದ ಮಹದೇವಯ್ಯ, ಉಪ ಮೇಯರ್ ಡಾ.ರೂಪ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಉಪ ಆಯುಕ್ತ ಮಹೇಶ್, ನಗರಪಾಲಿಕೆ ಸದಸ್ಯ ಶಿವಕುಮಾರ್, ಚಾಮರಾಜ ಉಪಾಧ್ಯಕ್ಷ ಶಿವಕುಮಾರ್, ವಾರ್ಡ್ ಅಧ್ಯಕ್ಷ ಕೃಷ್ಣಪ್ಪ, ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಪ್ರಧಾನ ಕಾರ್ಯದರ್ಶಿ ಪುನೀತ್, ಮಾಜಿ ಮೇಯರ್ ಆರ್.ಲಿಂಗಪ್ಪ, ಗ್ರಾಮದ ಮುಖಂಡರಾದ ರಾಮೇಗೌಡ, ದೇಸೀಗೌಡ, ಶಿವಲಿಂಗಣ್ಣ, ಚಿಕ್ಕಣ್ಣ, ಮಾದಪ್ಪ, ಸೋನಿಗೌಡರ ಮಕ್ಕಳಾದ ಬಸವಣ್ಣ, ವೆಂಕಟೇಶ್, ರಾಜಣ್ಣ, ಬೇಬಿ, ಮಹದೇವ್, ಕೆ.ಜಿ.ಕೊಪ್ಪಲಿನ ಯಜಮಾನರು, ವಲಯ ಕಚೇರಿ-3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಇನ್ನಿತರರಿದ್ದರು.

ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ

ಮೈಸೂರು, ಜ. 30– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ. 1 ರಿಂದ 28 ರವರೆಗೆ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೊಜ್ಜು ನಿವಾರಣಾ ಸೂತ್ರಗಳು, ಪಂಚಕರ್ಮ, ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸೆಯ ಜೀವನ ಶೈಲಿ ಮುಂತಾದವುಗಳನ್ನು, ಧ್ಯಾನ ಪಥ್ಯಾಹಾರ ಒಳಗೊಂಡಿರುತ್ತದೆ ಮಾಹಿತಿಗೆ ಮೊ. 9448253425, 9844549152 ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜ. 30– ಮೈಸೂರಿನ ಲಕ್ಷ್ಮೀಪುರುನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ 2 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ನುಂಗುವಾಗಿನ ತೊಂದರೆ, ಗಂಟಲಲ್ಲಿ ಉರಿತ ಅಥವಾ ತಡೆದ, ಧ್ವನಿ ಬದಲಾವಣೆ ಇರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ವಿವರಗಳಿಗೆ ದೂ. 0821-4259259 ಸಂಪರ್ಕಿಸಬಹುದು.

ಗಾಂಧೀಜಿಯವರ ನಂಬಿಕೆ, ತತ್ವ, ನಿಲುವುಗಳನ್ನು ಈಗ ಕೊಲ್ಲುತ್ತಾ ಸಾಗಿದ್ದೇವೆ

ವಿಮರ್ಶಕ, ಪ್ರಗತಿಪರ ಚಿಂತಕ ಪ್ರೊ.ಹೆಚ್.ಎಸ್.ರಾಘವೇಂದ್ರರಾವ್ ಬೇಸರ

ಮೈಸೂರು, ಜ.30(ಆರ್‌ಕೆಬಿ)– ಗಾಂಧೀಜಿಯವರ ಹತ್ಯೆಯ ನಂತರ ಅಂದಿನಿಂದ ಇಂದಿನವರೆಗೆ ಅವರು ನಂಬಿದ ತತ್ವಗಳು, ನಿಲುವುಗಳನ್ನು ಕೊಲ್ಲುತ್ತಾ ಸಾಗಿದ್ದೇವೆ. ಗಾಂಧಿಯವರನ್ನು ಯಾರೋ ಕೊಂದರು ಎಂದು ಹೇಳುವುದಕ್ಕಿಂತ ಗಾಂಧಿ ತತ್ವಗಳನ್ನು ಸರಿಯಾಗಿ ಅನುಸರಿಸಿದ್ದೇವೆಯೇ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಿದೆ ಎಂದು ಸಾಹಿತ್ಯ ವಿಮರ್ಶಕ, ಪ್ರಗತಿಪರ ಚಿಂತಕ ಪ್ರೊ.ಹೆಚ್.ಎಸ್.ರಾಘವೇಂದ್ರರಾವ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಶೇಷಾದ್ರಿಪುರಂ ಪದವಿ ಕಾಲೇಜು ವತಿಯಿಂದ ಮೈಸೂರಿನ ಗಾಂಧಿಭವನ ಸಭಾಂಗಣದಲ್ಲಿ ಹುತಾತ್ಮ ದಿನದ ಅಂಗವಾಗಿ ಸೋಮವಾರ ಏರ್ಪಡಿಸಿದ್ದ 75ನೇ ಸರ್ವೋದಯ ದಿನಾಚರಣೆ ಹುತಾತ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗಾಂಧಿ, ಬುದ್ಧ, ಬಸವ ಇನ್ನಿತರರ ಪ್ರತಿಮೆ ಮಾಡಿ, ಅದಕ್ಕೆ ಪೂಜೆ ಮಾಡಿ ಗೌರವಿಸುತ್ತಿದ್ದೇವೆ. ಆದರೆ, ಅವರು ತೋರಿಸಿದ ದಾರಿಗೆ ಬದಲಾಗಿ ಈ ದೇಶ ಬೇರೆ ದಾರಿ ಹಿಡಿಯುತ್ತಿದೆಯಲ್ಲ ಏಕೆ. ಇದು ಸರಿಯೇ, ತಪ್ಪೇ ಎಂದು ನಾವೆಲ್ಲರೂ ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ ಎಂದರು.



ಸ್ವಾತಂತ್ರ್ಯ ಬಂದ ಕ್ಷಣದಿಂದಲೇ ನಾವು, ನಮ್ಮ ದೇಶ ಬೇರೆ ಬೇರೆ ದಾರಿ ಹಿಡಿಯಿತಲ್ಲ. ಇಂತಹ ಹಲವಾರು ದಾರಿಗಳು ಗಾಂಧಿ ಬದುಕಿದ್ದಾಗಲೂ ಇತ್ತು. ಅವರು ಹೋದ ನಂತರವೂ ಇಂದಿಗೂ ಇದೆ. ದಾರಿಗಳಲ್ಲಿ ಕೆಲವರಿಗೆ ಅಧಿಕಾರ ನಡೆಸಲು ಅವಕಾಶ ಸಿಕ್ಕಿತ್ತು. ಬೇರೆಯವರಿಗೂ ಇದೇ ರೀತಿಯ ಅವಕಾಶ ಸಿಕ್ಕಿತ್ತು. ಆದರೆ, ಆಲೋಚನೆ ಇಲ್ಲದ, ದುರಾಲೋಚನೆಯುಳ್ಳವರು ಅಧಿಕಾರ ಹಿಡಿದರೆ ಹೀಗೆಲ್ಲ ಆಗುತ್ತದೆ. ಗಾಂಧಿ ಉತ್ತರಾಧಿಕಾರಿಯಾದ ನೆಹರು ಅವರಿಂದ ಹಿಡಿದು ನರೇಂದ್ರ ಮೋದಿಯವರೆಗೆ ದಾರಿಗಳು ಬದಲಾಗುತ್ತಾ ಬೇರೆ ಬೇರೆ ದಾರಿಯಲ್ಲಿ ದೇಶ ಸಾಗುತ್ತಿದೆ. ರಾಮ್ ಮನೋಹರ ಲೋಹಿಯಾ, ಪೆರಿಯಾರ್, ಜಯಪ್ರಕಾಶ್ ನಾರಾಯಣ್, ಕಾರ್ಲ್ ಮಾರ್ಕ್ಸ್, ನಕ್ಸಲೀಯರ ದಾರಿಗಳು, ಗೋಲ್ವಾಲ್ಕರ್, ಹೆಡಗೆವಾರ್ ದಾರಿ, ಬಾಬಾ ಸಾಹೇಬ್ ಅಂಬೇಡ್ಕರ್ ತೋರಿಸಿದ ಸಂವಿಧಾನದ ದಾರಿ... ಹೀಗೆ ಇವರೆಲ್ಲರ ಯೋಚನೆಗಳನ್ನು ಒಟ್ಟಾರೆಯಾಗಿ ಪಾಲಿಸಿ ನಮ್ಮ ದಾರಿ ನಾವು ಕಂಡುಕೊಳ್ಳಲಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮಹಾನಗರಪಾಲಿಕೆ ಪೌರ ಕಾರ್ಮಿಕ ಮಹಿಳೆ ಪೆಂಚಾಲಮ್ಮ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಮಾನಸಗಂಗೋತ್ರಿ ಲಲಿತಕಲಾ ಕಾಲೇಜಿನ ಬಿ.ರಶ್ಮಿ ನೇತೃತ್ವದ ವಿದ್ಯಾರ್ಥಿನಿಯರ ತಂಡ 'ವೈಷ್ಣವ ಜನತೋ...' ಗೀತೆ ಹಾಡಿದರು. ಬಳಿಕ, ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಎ.ಪಿ.ಜ್ಞಾನಪ್ರಕಾಶ್ ಸರ್ವಧರ್ಮ ಪ್ರತಿಜ್ಞಾ ವಿಧಿ ಬೋಧಿಸಿದರು. ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ಅಧ್ಯಕ್ಷೆ ವಹಿಸಿದ್ದರು. ಗಾಂಧಿ ಭವನ ನಿರ್ದೇಶಕ ಪ್ರೊ.ಎಸ್. ನರೇಂದ್ರ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶೇಷಾದ್ರಿಪುರಂ ಪದವಿ ಕಾಲೇಜು ಪ್ರಾಂಶುಪಾಲ ಪ್ರೊ.ಕೆ.ಸೌಮ್ಯ ಈರಪ್ಪ ಉಪಸ್ಥಿತರಿದ್ದರು.

ಶ್ರೀನಗರದಲ್ಲಿ ಭಾರತ್ ಜೋಡೋ ಯಾತ್ರೆಗೆ ತೆರೆ

ಶ್ರೀನಗರ, ಜ.30– ಜಮ್ಮು-ಕಾಶ್ಮೀರದ ಬೀದಿಗಳಲ್ಲಿ ನಡೆಯಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಯಾವುದೇ ಬಿಜೆಪಿ ನಾಯಕರಿಗೂ ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಭಯವಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

ಶ್ರೀನಗರದಲ್ಲಿ ನಡೆದ ಭಾರತ್ ಜೋಡೋ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರ ಸರ್ಕಾರ ಸರಿಯಾದ ಕಾನೂನು ಸುವ್ಯವಸ್ಥೆ ಕಾಪಾಡುತ್ತಿದೆ ಎನ್ನುವುದಾದರೆ ಅಮಿತ್ ಶಾ ಜಮ್ಮುವಿನಿಂದ ಶ್ರೀನಗರದ ಲಾಲ್ ಚೌಕ್‌ವರೆಗೆ ಪಾದಯಾತ್ರೆ ಮಾಡಲಿ ಎಂದು ಸವಾಲು ಹಾಕಿದರು. ಕಾಂಗ್ರೆಸ್ ಪಕ್ಷಕ್ಕಾಗಿ ಅಲ್ಲ. ದೇಶದ ಹಿತಕ್ಕಾಗಿ ಮಾಡಿದ ಯಾತ್ರೆ ಇದು. ದೇಶದ ಏಕತೆ ಹಾಗೂ ಜಾತ್ಯಾತೀತ ತೆಯನ್ನು ಉಳಿಸಲು ಈ ಯಾತ್ರೆ ಕೈಗೊಂಡೆ. ಪ್ರಜೆಗಳಿಂದ ಸಿಕ್ಕ ಅಭೂತ ಪೂರ್ವ ಪ್ರತಿಕ್ರಿಯೆ ಕಂಡು ನನ್ನ ಕಣ್ಣಲ್ಲಿ ನೀರು ಬಂದಿದೆ ಒಂದು ಹಂತದಲ್ಲಿ ಜೋಡೋ ಯಾತ್ರೆ ಪೂರ್ಣಗೊಳಿಸುವೆನಾ ಎಂಬ ಪ್ರಶ್ನೆ ನನ್ನಲ್ಲಿ ಮೂಡಿತ್ತು ಮಳೆ, ಚಳಿ ಲೆಕ್ಕಿಸದೇ ಪ್ರಜೆಗಳು ಬಂದಿದ್ದಾರೆ. ಈ ಯಾತ್ರೆಯುದ್ದಕ್ಕೂ ನಾನು ಅನೇಕ ಪಾಠಗಳನ್ನು ಕಲಿತೆ. ಜನರ ದೀನ ಸ್ಥಿತಿ ಕಂಡು ಟೀಶರ್ಟ್‌ನಲ್ಲೇ ಯಾತ್ರೆ ಮಾಡಲು ನಿರ್ಣಯಿಸಿದೆ ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಉದ್ದೇಶಿತ ಹತ್ಯೆಗಳು ಮತ್ತು ಬಾಂಬ್ ಸ್ಫೋಟಗಳು ನಡೆಯುತ್ತಿವೆ. ಜನ ಪ್ರತಿನಿತ್ಯ ಭಯದಲ್ಲಿ ಜೀವನ ನಡೆಸುತ್ತಿದ್ದಾರೆ. ಕಾನೂನು ಸುವ್ಯವಸ್ಥೆ ಸರಿ ಇಲ್ಲ. ಕೇಂದ್ರ ಸರ್ಕಾರ ನಮ್ಮ ಯಾತ್ರೆಗೆ ಸೂಕ್ತ ಭದ್ರತೆ ನೀಡಲಿಲ್ಲ. ಈ ಬಗ್ಗೆ ಹೇಳಿದಾಗ ಬಿಜೆಪಿಯವರು ಆಧಾರರಹಿತ ಆರೋಪ ಎನ್ನುತ್ತಾರೆ. ಆದರೆ ಕಾಶ್ಮೀರದಲ್ಲಿ ಯಾವೊಬ್ಬ ಬಿಜೆಪಿ ನಾಯಕನೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದಿಲ್ಲ ಏಕೆ? ಎಂದು ಪ್ರಶ್ನಿಸಿದರು.



ನಾವು ಕಳೆದ ನಾಲ್ಕು ದಿನಗಳಿಂದ ಇಲ್ಲಿನ ಬೀದಿಗಳಲ್ಲಿ ನಡೆದಿದ್ದೇವೆ. ನಮಗೆ ಯಾವುದೇ ತೊಂದರೆ ಆಗಿಲ್ಲ. ನಮ್ಮಂತೆ ಯಾವುದೇ ಬಿಜೆಪಿ ನಾಯಕನೂ ಇಲ್ಲಿ ಈ ರೀತಿ ನಡೆಯಲು ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಭಯವಿದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತು ಆರ್‌ಎಸ್‌ಎಸ್ ಇಲ್ಲಿನ ಹಿಂಸಾಚಾರವನ್ನು ನೋಡಿಲ್ಲ. ಇಲ್ಲಿನ ಜನರ ನರಕಯಾತನೆ ಅವರಿಗೆ ಅರಿವಾಗಿಲ್ಲ ಎಂದು ಟೀಕಿಸಿದ್ದಾರೆ.

ಬರೋಬ್ಬರಿ 136 ದಿನಗಳ ಕಾಲ, 4,084 ಕಿಲೋಮೀಟರ್ ಉದ್ದ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ರಾಹುಲ್ ಗಾಂಧಿ ಕೈಗೊಂಡಿದ್ದ ಭಾರತ್ ಜೋಡೋ ಯಾತ್ರೆ ಇಂದು ಸಮಾಪ್ತಿಗೊಂಡಿದೆ. ಭಾರೀ ಹಿಮಪಾತ, ಕೊರೆವ ಚಳಿ ನಡುವೆ ಶ್ರೀನಗರದಲ್ಲಿ ಸಮಾರೋಪ ಸಮಾರಂಭ ನಡೆಯಿತು. ಲಾಲ್ ಚೌಕ್‌ನಲ್ಲಿ ಇಂದು ಕೂಡ ತ್ರಿವರ್ಣ ಧ್ವಜವನ್ನು ರಾಹುಲ್ ಗಾಂಧಿ ಹಾರಿಸಿದರು. ಸಮಾರೋಪದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಪ್ರಿಯಾಂಕ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಓಮರ್ ಅಬ್ದುಲ್ಲಾ, ಮೆಹಬೂಬಾ ಮುಫ್ತಿ ಸೇರಿ ಹಲವರು ಪಾಲ್ಗೊಂಡಿದ್ರು. ಒಟ್ಟು 21 ಪಕ್ಷಗಳನ್ನು ಈ ಸಮಾರಂಭಕ್ಕೆ ಕಾಂಗ್ರೆಸ್ ಆಹ್ವಾನಿಸಿತ್ತು. ಬಹುತೇಕ ಪಕ್ಷಗಳು ಭದ್ರತಾ ಕಾರಣಗಳಿಂದ ಈ ಸಮಾರೋಪಕ್ಕೆ ಹಾಜರಾಗಲಿಲ್ಲ. ಹಿಮಪಾತದ ಕಾರಣ ವಿಮಾನಗಳ ಹಾರಾಟ ಬಂದ್ ಆದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಅನೇಕರು ದೆಹಲಿಯಲ್ಲೇ ಉಳಿದರು.

ಐದನೇ ಪುಟದಿಂದ

ಡಿಕೆಶಿ ನಾ ಬಿಡೆನು...

ರಾಜಕಾರಣಕ್ಕೆ ಬರುವ ಮುನ್ನ ಡಿ.ಕೆ.ಶಿವಕುಮಾರ್ ಕನಕಪುರದಲ್ಲಿ 100 ರೂಪಾಯಿಗೆ ಬ್ಲೂ ಫಿಲಂ ತೋರಿಸುತ್ತಿದ್ದ. ಈ ವಿಚಾರ ಆಗ ಪತ್ರಿಕೆಗಳಲ್ಲಿ ಬಂದಿದೆ. ಇಂತಹ ವ್ಯಕ್ತಿ ಸಿ.ಡಿ.ಗಳನ್ನು ಮಾಡಿಕೊಂಡು ಎಲ್ಲರನ್ನೂ ಬ್ಲಾಕ್‌ಮೇಲ್ ಮಾಡುತ್ತಾ, ಭ್ರಷ್ಟಾಚಾರದಲ್ಲಿ ತೊಡಗಿದ್ದಾನೆ. ಅವನ ಬಳಿ ನೂರಾರು ಸಿ.ಡಿ.ಗಳಿವೆ. ದೊಡ್ಡ-ದೊಡ್ಡ ರಾಜಕಾರಣಿಗಳು ಹಾಗೂ ಉನ್ನತ ಅಧಿಕಾರಿಗಳ ಸಿ.ಡಿ.ಗಳನ್ನಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ. ಅದರ ಮೂಲಕ ಸಾವಿರಾರು ಕೋಟಿ ರೂ. ಗಳಿಸುತ್ತಿದ್ದಾನೆ. ಉದಾಹರಣೆಗೆ ದಾವಣಗೆರೆಯ ಚೀಫ್ ಇಂಜಿನಿಯರ್‌ವೊಬ್ಬರು ಇವನ ಸಿ.ಡಿ. ಜಾಲಕ್ಕೆ ಸಿಲುಕಿ ನೂರಾರು ಕೋಟಿ ರೂ. ಅವ್ಯವಹಾರ ಮಾಡಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕರ ಸಿ.ಡಿ.ಯೂ ಕೂಡ ಇವನ ಬಳಿ ಇದ್ದು, ಆ ಕಾರಣದಿಂದಲೇ ಯಾರೂ ಇವನ ವಿರುದ್ಧ ಮಾತನಾಡುತ್ತಿಲ್ಲ. ಅಷ್ಟೇ ಏಕೆ, ಸಿದ್ದರಾಮಯ್ಯ ಅವರಂತಹವರೇ ಮಾತನಾಡಲು ಆಗುತ್ತಿಲ್ಲ. ಎಲ್ಲರನ್ನೂ ಆತ ಸಿ.ಡಿ. ಮೂಲಕ ಆಪರೇಟ್ ಮಾಡುತ್ತಿದ್ದಾನೆ ಎಂದು ಆಪಾದಿಸಿದರು. ಸಿ.ಡಿ. ಮೂಲಕ ಬ್ಲಾಕ್‌ಮೇಲ್ ಮಾಡಿ ನೀರಾವರಿ ಇಲಾಖೆ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಪ್ರಯತ್ನಿಸಿದ್ದರು. ಮೊದಲಿಗೆ ನನಗೆ 3 ಸಿ.ಡಿ.ಗಳು ಬಂದವು. ಅದನ್ನು ತೋರಿಸಿ, 'ನೀವು ಮಂತ್ರಿಯಾಗಿಯೇ ಮುಂದುವರೆಯಿರಿ, ಆದರೆ ನಾವು ಹೇಳಿದಂತೆ ಕೇಳಿ. ಹಣಕಾಸು ವಿಚಾರವನ್ನು ನಾವು ನೋಡಿಕೊಳ್ಳುತ್ತೇವೆ' ಎಂದು ಡಿ.ಕೆ.ಶಿವಕುಮಾರ್ ಗ್ಯಾಂಗ್ ಹೇಳಿತ್ತು. ಆದರೆ ಅದಕ್ಕೆ ನಾನು ಮಣಿಯಲಿಲ್ಲ. ಈ ಕಾರಣದಿಂದ 40 ಕೋಟಿ ಖರ್ಚು ಮಾಡಿ ನನ್ನ ವಿರುದ್ಧ ಸಿ.ಡಿ. ಬಿಡುಗಡೆ ಮಾಡಿದರು. ತಪ್ಪೇ ಮಾಡದೇ ಇದ್ದರೂ ನಾನು ತಪ್ಪು ಮಾಡಿದ್ದೇನೆ ಎಂದು ಹೇಳುವಂತೆ ಮಾಡಿದರು. ಕಾನೂನಿನ ರಕ್ಷಣೆಗಾಗಿ ತಪ್ಪು ಮಾಡದೇ ಇದ್ದರೂ ನಾನು ತಪ್ಪು ಮಾಡಿದ್ದೇನೆ ಎಂದು ಹೇಳುವಂತಾಯಿತು ಎಂದ ಜಾರಕಿಹೊಳಿ, ಸಿ.ಡಿ. ಕೇಸ್‌ನಲ್ಲಿ ಸಿ.ಡಿ. ಲೇಡಿ, ಡಿ.ಕೆ.ಶಿವಕುಮಾರ್, ಸಂಚು ನಡೆಸಿದ ಶ್ರವಣ್, ನರೇಶ್, ಕನಕಪುರದ ಕ್ವಾರಿ ಮಾಲೀಕ ಶಿವಕುಮಾರ್, ಡಿಕೆಶಿ, ಕಾರು ಚಾಲಕ ಮತ್ತು ಮಂಡ್ಯದ ಇಬ್ಬರು ದೊಡ್ಡ ರಾಜಕಾರಣಿಗಳು ಜೈಲಿಗೆ ಹೋಗಲೇಬೇಕು. ಅದಕ್ಕೆ ಸಂಬಂಧಪಟ್ಟ ಎಲ್ಲಾ ಸಾಕ್ಷ್ಯಗಳನ್ನು ಸಿಬಿಐಗೆ ಕೊಡುತ್ತೇನೆ ಎಂದರು.

ದೇವನಹಳ್ಳಿಯಲ್ಲಿ ಶ್ರವಣ್ ಮನೆ ರೈಡ್ ಆದಾಗ ನೂರಾರು ಸಿಡಿಗಳು ದೊರೆತಿವೆ. ಅದರಲ್ಲಿ ಕಾಂಗ್ರೆಸ್‌ನ ದೊಡ್ಡ ನಾಯಕರುಗಳು ಸೇರಿದಂತೆ ಹಲವಾರು ರಾಜಕಾರಣಿಗಳ ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಸಿಡಿಗಳಿವೆ. ಇದರ ಬಗ್ಗೆ ಸಿಬಿಐ ತನಿಖೆ ನಡೆಯಲೇಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದರು.

ಸಂಬಂಧ ಹಳಸಿದ್ದು: ಆತ್ಮೀಯ ಸ್ನೇಹಿತರಾಗಿದ್ದ ತನ್ನ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಸಂಬಂಧ ಹಳಸಿದ್ದು ಹೇಗೆ ಎಂಬುದನ್ನೂ ಕೂಡ ಜಾರಕಿಹೊಳಿ ವಿವರಿಸಿದರು. ತಾನು ಸಹಕಾರ ಸಚಿವರಾಗಿದ್ದಾಗ ತಮ್ಮನ್ನು ಸಂಪರ್ಕಿಸಿದ ಡಿ.ಕೆ.ಶಿವಕುಮಾರ್, ಶಾಂತಿನಗರ ಕೋ-ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟಂತೆ ಬೆಂಗಳೂರಿನ ಹೃದಯ ಭಾಗದಲ್ಲಿರುವ 66 ಎಕರೆ ಭೂಮಿಗೆ ಸಂಬಂಧಿಸಿದ ಸುಮಾರು 10 ಸಾವಿರ ಕೋಟಿ ರೂ. ವ್ಯವಹಾರದ ಫೈಲನ್ನು ಕ್ಲಿಯರೆನ್ಸ್ ಮಾಡುವಂತೆ ಗಂಟು ಬಿದ್ದಿದ್ದ. ನಾನು ಅಧಿಕಾರಿಗಳ ಸಭೆ ನಡೆಸಿದಾಗ ಈ ವ್ಯವಹಾರ ಬಹಳ ಡೇಂಜರ್ ಎಂದು ಗೊತ್ತಾಗಿ ಫೈಲ್ ಕ್ಲಿಯರೆನ್ಸ್ ಮಾಡಿಲ್ಲ. ಆಗಲೇ ನನ್ನ ಮತ್ತು ಅವನ ಸಂಬಂಧ ಹಳಸಲು ಆರಂಭಿಸಿತು. ಅನಂತರ ವಿಷಕನ್ಯೆ (ಲಕ್ಷ್ಮೀ ಹೆಬ್ಬಾಳ್ಕರ್) ಪ್ರವೇಶದಿಂದ ಸಂಬಂಧ ಸಂಪೂರ್ಣವಾಗಿ ಹಳಸಿತು ಎಂದರು.

ಡಿ.ಕೆ.ಶಿವಕುಮಾರ್ ಮತ್ತು ವಿಷಕನ್ಯೆಯಿಂದ ರಾಜ್ಯ ಹಾಳಾಗಿದೆ. ಕಾಂಗ್ರೆಸ್ ಪಕ್ಷ ಸರ್ವನಾಶವಾಗಿದೆ ಎಂದ ಅವರು, ನನ್ನ ಮತ್ತು ಡಿಕೆಶಿ ಸಂಬಂಧ ಸಂಪೂರ್ಣವಾಗಿ ಹಾಳಾಗಲು ವಿಷಕನ್ಯೆಯೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಕೆ ಬಗ್ಗೆ ಡಿ.ಕೆ.ಶಿವಕುಮಾರ್‌ಗೆ ವಿರೋಧವೇ ಇತ್ತು. ಅವಳಿಗೆ ಟಿಕೆಟ್ ಕೊಡುವುದು ಬೇಡ ಎಂದು ಡಿಕೆಶಿ ಹೇಳಿದ್ದ. ಆದರೆ ನಾನೇ ಗಲಾಟೆ ಮಾಡಿ ಟಿಕೆಟ್ ಕೊಡಿಸಿದೆ. ಕೊನೆಗೆ ನನಗೇ ಮತ್ತು ಡಿಕೆಶಿಗೆ ವಿಷಕನ್ಯೆ ಮುಳುವಾಗಿ ಬಿಟ್ಟಳು ಎಂದು ಹೇಳಿದರು.

ಆಡಿಯೋದಲ್ಲಿ ಏನಿದೆ: ಡಿ.ಕೆ.ಶಿವಕುಮಾರ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋದಲ್ಲಿ 'ನನಗೆ ಒಂದು ಆಸೆಯಿತ್ತು. ದುಬೈನಲ್ಲಿ ಮನೆ ಇದೆ. ಲಂಡನ್‌ನಲ್ಲಿ ಮನೆ ಇದೆ. ದೆಹಲಿಯಲ್ಲಿ ಒಂದು ಮನೆ ತೆಗೆದುಕೊಂಡು ಇಟ್ಟುಕೊಂಡಿದ್ದೇನೆ. ಮುಂಬೈನಲ್ಲಿ ಫ್ಲ್ಯಾಟ್ ಇದೆ. ನನ್ನ ಮನೆ ರೈಡ್ ಆದಾಗ ಮನೆಯಲ್ಲಿ 45 ಕೋಟಿ ರೂ. ಸಿಕ್ಕಿದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿರುವ ವಿಚಾರ ಜಾರಕಿಹೊಳಿ ಬಿಡುಗಡೆ ಮಾಡಿದ ಆಡಿಯೋದಲ್ಲಿದೆ.

ಸಿಡಿ ವಿಚಾರದಲ್ಲಿ ನಾನು 'ಎಲ್ ಬೋರ್ಡ್'

ಶ್ರೀಗಳ ಸಂಪರ್ಕದಿಂದ ನಾನು ಸಂಸ್ಕಾರ ಕಲಿತಿದ್ದು, ಅವರನ್ನು ಅನುಸರಿಸಿ ಬಡವರಿಗೆ ಸಹಾಯ ಮಾಡಬೇಕೆಂಬುದನ್ನು ಕಲಿತ್ತಿದ್ದೇನೆ. ಸಿಡಿ ವಿಚಾರದಲ್ಲಿ ನಾನು ಎಲ್ ಬೋರ್ಡ್ ಎಂದು ಪುನರುಚ್ಚರಿಸಿದರು. ಹಿಮವದ್ ಗೋಪಾಲಸ್ವಾಮಿ ಬೆಟ್ಟ ಅಭಿವೃದ್ಧಿ ಕುರಿತಂತೆ ಪ್ರಧಾನಿ ಮೋದಿ ಅವರಿಗೆ ಯುವಕರೊಬ್ಬರು ಪತ್ರ ಬರೆದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಬೆಟ್ಟವು ಶತಮಾನಗಳಿಂದ ಇದೆ. ಗುಡಿ ಗೋಪುರ ಅಭಿವೃದ್ಧಿ ಮಾಡಬೇಕೆಂಬುದು ನಮ್ಮ ಬಯಕೆಯಾಗಿದೆ. ಜತೆಗೆ ಕಾನೂನಿನ ಬುದ್ಧಿವಂತಿಕೆಯನ್ನೂ ಬಳಸಬೇಕಾಗುತ್ತದೆ. ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ರಸ್ತೆ ಸೇರಿದಂತೆ ಅಭಿವೃದ್ಧಿ ಕಾರ್ಯಕ್ಕೆ ಬದ್ಧರಾಗಿದ್ದೇವೆ. ಬಿಳಿಗಿರಿರಂಗನಬೆಟ್ಟದಲ್ಲಿ ಎಷ್ಟು ವರ್ಷಗಳಿಂದ ರಥೋತ್ಸವ ನಿಂತಿತ್ತು. ನಾವು ಬಂದು ನಂತರ ಮಾಡಿಲ್ಲವೇ. ಅದೇ ರೀತಿ ಹಿಮವದ್ ಗೋಪಾಲಸ್ವಾಮಿ ಬೆಟ್ಟವನ್ನು ಅಭಿವೃದ್ಧಿ ಮಾಡುವುದಾಗಿ ತಿಳಿಸಿದರು.

ಮೊದಲ ಹಂತದ ಟೋಲ್ ಸಂಗ್ರಹ

ಕಾರ್ಯ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ)ದ ಅಧಿಕಾರಿಗಳು ತ್ವರಿತವಾಗಿ ಕಾಮಗಾರಿ ನಡೆಸುತ್ತಿದ್ದಾರೆ. ದಶಪಥ ಹೆದ್ದಾರಿ ಕಾಮಗಾರಿಯನ್ನು ಫೆ.27ರೊಳಗಾಗಿ ಪೂರ್ಣಗೊಳಿಸುವ ಗುರಿ ಹೊಂದಿದ್ದು, ಮಾರ್ಚ್ ಮೊದಲ ಅಥವಾ 2ನೇ ವಾರ ಪ್ರಧಾನಿ ಮೋದಿ ಅವರು ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು ಉದ್ಘಾಟಿಸಿ, ನಾಡಿಗೆ ಸಮರ್ಪಿಸುವರು. ಈ ದಶಪಥದಲ್ಲಿರುವ ಎರಡೂ ಟೋಲ್ ಪ್ಲಾಜಾಗಳಲ್ಲಿ ತಲಾ 11 ಗೇಟ್‌ಗಳಿದ್ದು, ಬಸ್ಸು, ಕಾರು, ಟೆಂಪೋಗಳಿಗೆ ಪ್ರತ್ಯೇಕ ಗೇಟ್‌ಗಳಲ್ಲಿ ಟೋಲ್ ಫೀ ಸಂಗ್ರಹಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರತೀ ಪ್ಲಾಜಾದಲ್ಲೂ ಫಾಸ್ಟ್‌ಟ್ಯಾಗ್, ಹೈಟೆಕ್ ಟೋಲ್ ಸಿಸ್ಟಂ ಸೌಲಭ್ಯವನ್ನು ಒದಗಿಸಲಾಗಿದ್ದು, ಪ್ರವೇಶ, ನಿರ್ಗಮನಕ್ಕೆ ವ್ಯವಸ್ಥೆ ಕಲ್ಪಿಸಿ ವಾಹನಗಳು ಹೆಚ್ಚು ಸಮಯ ನಿಲ್ಲದೇ ಮುಂದೆ ಚಲಿಸಲು ಅನುಕೂಲ ಕಲ್ಪಿಸಲಾಗಿದೆ. ಪ್ರತೀ ಪ್ಲಾಜಾದಲ್ಲೂ ವಿವಿಧ ಮಾದರಿಯ ವಾಹನಗಳಿಗೆ ಟೋಲ್ ಫೀ ನಿಗದಿಪಡಿಸಿ ದರ ಪಟ್ಟಿಯನ್ನು ಅಳವಡಿಸಲಾಗುವುದು. ಈ ರಸ್ತೆಯ ಒಟ್ಟು ನಿರ್ಮಾಣ ವೆಚ್ಚ, ನಿತ್ಯ ಸಂಚರಿಸುವ ವಾಹನಗಳ ಸಂಖ್ಯೆ ಆಧರಿಸಿ ವಾಹನಗಳಿಗೆ ಟೋಲ್ ಶುಲ್ಕ ನಿಗದಿಪಡಿಸಲಾಗುವುದು.ಪ್ರತೀ 60 ಕಿ.ಮೀ. ಒಂದರಂತೆ ಟೋಲ್ ಪ್ಲಾಜಾ ಸ್ಥಾಪಿಸಿ ಸರಾಸರಿ ಪ್ರತೀ ಕಿ.ಮೀ.ಗೆ 1.5 ರಿಂದ 2 ರೂ. ಶುಲ್ಕ ಸಂಗ್ರಹಿಸಬೇಕೆಂದು ಮಾರ್ಗಸೂಚಿಯಲ್ಲಿದೆ. ಆದರೂ ಪಥಗಳ ಸಂಖ್ಯೆ ಸೇತುವೆ, ಅಂಡರ್ ಪಾಸ್‌ಗಳನ್ನಾಧರಿಸಿ ಟೋಲ್ ಶುಲ್ಕ ನಿಗದಿ ಮಾಡಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ವಾಹನ ಸವಾರರಿಗೆ ಕಂಟಕ

ಸಾಧ್ಯತೆ ಇದೆ. ಕೆಲ ದಿನಗಳ ಹಿಂದೆಯಷ್ಟೆ ಬೆಂಗಳೂರಿನಲ್ಲಿ ಮೆಟ್ರೋ ಕಾಮಗಾರಿ ಸ್ಥಳದಲ್ಲಿ ಕಬ್ಬಿಣದ ರಾಡುಗಳ ಪಿಲ್ಲರ್ ಉರುಳಿ ಬಿದ್ದ ಪರಿಣಾಮ ಬೈಕ್‌ನಲ್ಲಿ ಹೋಗುತ್ತಿದ್ದ ಕುಟುಂಬದ 2 ಜೀವಗಳು ಬಲಿಯಾಗಿವೆ. ಇದೇ ರೀತಿಯ ಪ್ರಕರಣ ಇದೀಗ ನೂತನ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಸಂಭವಿಸುವ ಸಾಧ್ಯತೆ ಇದ್ದು, ವಾಹನ ಸವಾರರಲ್ಲಿ ಆತಂಕ ತಂದಿದೆ. ಈ ಹೆದ್ದಾರಿಯ 2 ಬದಿಯಲ್ಲಿ ಅಳವಡಿಸಿರುವ ಅತ್ಯಂತ ಎತ್ತರದ ವಿದ್ಯುತ್ ಕಂಬಗಳಿಗೆ ಆಧಾರವಾಗಿ ಅಳವಡಿಸಿದ್ದ ಅಡ್ಡಪಟ್ಟಿಗಳು ಬಹುತೇಕ ಕಳ್ಳತನವಾ ಗಿವೆ. ಇದರಿಂದಾಗಿ ಈ ಎತ್ತರದ ವಿದ್ಯುತ್ ಕಂಬಗಳು ಅಸ್ಥಿ ಪಂಜರ ದಂತೆ ಕಾಣುತ್ತಿದ್ದು, ರಸ್ತೆ ಮಧ್ಯೆ ವಾಲುವ ಹಂತದಲ್ಲಿವೆ. ಜೋರಾಗಿ ಗಾಳಿ ಬೀಸಿದರೆ ಈ ವಿದ್ಯುತ್ ಕಂಬಗಳು ಉರುಳಿ ಬಿದ್ದು ಅಪಾಯ ಸಂಭವಿಸುವ ಸಾಧ್ಯತೆ ಇದ್ದು, ಜನರು ಮತ್ತು ವಾಹನಗಳ ಮೇಲೆ ಬಿದ್ದರೆ ವಾಹನ ಚಾಲಕರು, ಪ್ರಯಾಣಿಕರಿಗೂ ಪ್ರಾಣಾಪಾಯವಿದೆ. ಸಂಬಂಧ ಪಟ್ಟ ಹೆದ್ದಾರಿ ಪ್ರಾಧಿಕಾರದವರು ಎಚ್ಚೆತ್ತುಕೊಳ್ಳಬೇಕೆಂದು ವಾಹನ ಸವಾರು ಆಗ್ರಹಿಸಿದ್ದಾರೆ.

ಎಲ್ಲಾ ವರ್ಗಕ್ಕೂ ಆದ್ಯತೆ

ಇವೆರಡನ್ನೂ ಅತ್ಯಂತ ಶುದ್ಧವಾಗಿ ಪ್ರತಿಪಾದಿಸಿದ್ದರು. ಸದಾಕಾಲ ತಮ್ಮನ್ನು ತಾವೇ ಪರೀಕ್ಷೆಗೆ ಒಳಪಡಿಸಿಕೊಂಡು ಪರಿಶುದ್ಧ ವಾಗುತ್ತಿದ್ದರು. ಇಂಥ ಪ್ರಕ್ರಿಯೆ ಗಾಂಧೀಜಿ ಯವರು ಜೀವನದುದ್ದಕ್ಕೂ ನಡೆಸಿಕೊಂಡು ಬಂದಿರುವುದು ನಾವು ನೋಡುತ್ತೇವೆ. ಅಹಿಂಸೆಯಲ್ಲಿ ಬಹಳ ದೊಡ್ಡ ಶಕ್ತಿ ಇದೆ ಎಂದು ಇಡೀ ಜಗತ್ತಿಗೆ ತೋರಿಸಿಕೊಟ್ಟವರು. ಅಹಿಂಸೆಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವವರಲ್ಲಿ ಮುಂಚೂಣಿಯಲ್ಲಿದ್ದರು ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಅನಾಮಧೇಯರು ತಮ್ಮ ಆಸ್ತಿಪಾಸ್ತಿಗಳನ್ನು ತ್ಯಾಗ ಮಾಡಿದ್ದರು. ಗಟ್ಟಿ ನಿಲುವು ತೆಗೆದುಕೊಂಡು ಹೋರಾಟಕ್ಕೆ ಹೊಸ ದಿಕ್ಸೂಚಿ ನೀಡಿದ ಸುಭಾಶ್ ಚಂದ್ರ ಬೋಸ್ , ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಲೋಕಮಾನ್ಯ ಬಾಲಗಂಗಾಧರ ತಿಲಕ್ ಮುಂತಾದವರೂ ಕೂಡ ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕು ನೀಡಿದರು. ಇವೆಲ್ಲವನ್ನೂ ಕ್ರೋಢೀಕರಿಸಿ ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿ ಸತ್ಯಾಗ್ರಹ ನಡೆಸಿ ಅಭಿಯಾನ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಪರಿವರ್ತನೆ ಮಾಡಿ ಬ್ರಿಟಿಷರ ಜೊತೆ ಕಠಿಣ ಮಾತುಕತೆ ನಡೆಸಿ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದರು ಎಂದು ಹೇಳಿದರು.

ನಿಧನ


ಶ್ರೀಮತಿ ಮಾಲಿನಿ



ಮೈಸೂರು,ಜ.30– ಮೈಸೂರಿನ ಕುವೆಂಪು ನಗರ ನಿವಾಸಿ, ಉದ್ಯಮಿ ದೇವಪ್ರಕಾಶ್ ಅವರ ಧರ್ಮಪತ್ನಿ, ಉಪತಹಶೀಲ್ದಾರ್ ಶ್ರೀಮತಿ ಮಾಲಿನಿ ಅವರು ಸೋಮವಾರ ಮಧ್ಯಾಹ್ನ ನಿಧನರಾದರು. ಇವರಿಗೆ 59 ವರ್ಷ ವಯಸ್ಸಾಗಿತ್ತು. ಮೃತರು ಪತಿ ದೇವಪ್ರಕಾಶ್, ಓರ್ವ ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ತಲೆಮರೆಸಿಕೊಂಡಿರುವ ಕೊಲೆ ಅಪರಾಧಿ ಸುಳಿವು ಕೊಟ್ಟರೆ 50 ಸಾವಿರ ಬಹುಮಾನ

ಮೈಸೂರು ನಗರ ಪೊಲೀಸ್ ಆಯುಕ್ತರ ಪ್ರಕಟಣೆ



ಮೈಸೂರು,ಜ.30–ಪೆರೋಲ್ ಮೇಲೆ ತೆರಳಿದ್ದ ಖೈದಿ ಮತ್ತೆ ಜೈಲಿಗೆ ಬಾರದೆ 14 ವರ್ಷದಿಂದ ತಲೆಮರೆಸಿಕೊಂಡಿದ್ದು, ಈತನ ಪತ್ತೆ ಮಾಡಿಕೊಟ್ಟವರಿಗೆ ಅಥವಾ ಸುಳಿವು ನೀಡಿದವರಿಗೆ 50 ಸಾವಿರ ರೂ. ನಗದು ಬಹು ಮಾನ ನೀಡಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಂಡ್ಯ ಜಿಲ್ಲೆಯ ಪಾಲಹಳ್ಳಿ ಗ್ರಾಮದ ಸೋಮ ಅಲಿಯಾಸ್ ಕೋತಿ ಸೋಮ ತಲೆಮರೆಸಿಕೊಂಡವನಾಗಿದ್ದು, ಕೊಲೆ ಪ್ರಕರಣವೊಂದರಲ್ಲಿ ಮಂಡ್ಯ ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಈತ, ಮೈಸೂರು ಕೇಂದ್ರ ಕಾರಾಗೃಹದಲ್ಲಿ ಸಜಾಬಂಧಿಯಾಗಿದ್ದ ವೇಳೆ 30 ದಿನಗಳ ಪೆರೋಲ್ ಮೇಲೆ 2009ರ ನವೆಂಬರ್ 11ರಂದು ತೆರಳಿದ್ದು, ಮತ್ತೆ ಜೈಲಿಗೆ ಬಾರದೆ ತಲೆಮರೆಸಿಕೊಂಡಿದ್ದಾನೆ. ಈತನ ಬಗ್ಗೆ ಮಾಹಿತಿ ಇರುವವರು ನಜರ್‌ಬಾದ್ ಠಾಣೆ ದೂ.ಸಂಖ್ಯೆ–0821–2418308, 9480802233 ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 0821–2418339 ಅನ್ನು ಸಂರ್ಕಿಸುವಂತೆ ಪೊಲೀಸ್ ಆಯುಕ್ತರು ಕೋರಿದ್ದಾರೆ.

ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ ಇಂದು



ಮೈಸೂರು, ಜ.30– ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷರೂ ಆದ ಕರ್ನಾಟಕ ರಾಜ್ಯ ಅಪೆಕ್ಸ್ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷರಾದ ಜಿ.ಡಿ.ಹರೀಶ್‌ಗೌಡರ ಹುಟ್ಟಹಬ್ಬದ ಸಮಾರಂಭವನ್ನು ವಿಜಯನಗರದ ಕಾಳಿದಾಸ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಆಯೋಜಿಸಲಾಗಿದೆ. ನಾಳೆ(ಜ.31) ಬೆಳಗ್ಗೆ 9ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಜಿ.ಡಿ.ಹರೀಶ್ ಗೌಡ ಅಭಿಮಾನಿಗಳು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸೇರಿ ಹುಟ್ಟುಹಬ್ಬ ಆಚರಿಸಲಿದ್ದಾರೆ.

ಬ್ರಹ್ಮೋತ್ಸವ ರದ್ದು

ಮೈಸೂರು,ಜ.30– ಟಿ.ನರಸೀಪುರ ತಾಲೂಕಿನ ಮುಡುಕುತೊರೆ ಶ್ರೀ ಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಪುನರ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಮೂಲ ದೇವಾಲಯವನ್ನು ಕೆಡವಲಾಗಿರುವುದರಿಂದ ಸದರಿ ದೇವಾಲಯದಲ್ಲಿ ಜರುಗುವ 2023ರ ಶ್ರೀಯವರ ಬ್ರಹ್ಮೋತ್ಸವ(ಬ್ರಹ್ಮ ರಥೋತ್ಸವ)ವನ್ನು ರದ್ದುಗೊಳಿಸಿ ಆದೇಶ ಹೊರಡಿಸಲಾಗಿದೆ.

ಹೊನ್ನೇನಹಳ್ಳಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಲೋಕಾರ್ಪಣೆ

ಪ್ರತಿಯೊಬ್ಬರೂ ರಾಯಣ್ಣರ ಆದರ್ಶ ಮೈಗೂಡಿಸಿಕೊಳ್ಳಿ: ಸಚಿವ ಭೈರತಿ ಬಸವರಾಜು





ಕೆಆರ್.ಪೇಟೆ, ಜ.30– ತಾಲೂಕಿನ ಹೊನ್ನೇನಹಳ್ಳಿ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕರ ಬಳಗದಿಂದ ನಿರ್ಮಿಸಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ ನೇಣುಗಂಬಕ್ಕೇರಿ ಹುತಾತ್ಮನಾದ ಕಿತ್ತೂರು ಸಂಸ್ಥಾನದ ರಾಣಿ ಚೆನ್ನಮ್ಮನ ಬಲಗೈ ಬಂಟ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹುಟ್ಟಿದ್ದು ಆ.15, ಹುತಾತ್ಮರಾಗಿದ್ದು ಜ.26. ಹೀಗಾಗಿ ಈ ಎರಡೂ ದಿನವೂ ಪವಿತ್ರ ದಿನಗಳಾಗಿವೆ. ಏಕೆಂದರೆ ಆ.15 ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ. ಜ.26 ಸಂವಿಧಾನ ಜಾರಿಗೆ ಬಂದ ದಿನ. ಹೀಗಾಗಿ ಗಣರಾಜ್ಯೋತ್ಸವದಲ್ಲಿ ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ಸರ್ದಾರ್ ವಲ್ಲಭ ಬಾಯ್ ಪಟೇಲ್ ಫೋಟೋಗಳ ಜೊತೆಗೆ ಸಂಗೊಳ್ಳಿ ರಾಯಣ್ಣನ ಫೋಟೋ ಇಟ್ಟು ಗೌರವ ಸಲ್ಲಿಸಲು ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸಂಗೊಳ್ಳಿ ರಾಯಣ್ಣ ಒಂದು ಸಮುದಾಯಕ್ಕೆ ಸೀಮಿತರಲ್ಲ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು. ರಾಯಣ್ಣನಲ್ಲಿದ್ದ ದೇಶಭಕ್ತಿ, ತ್ಯಾಗ, ಬಲಿದಾನ ಗುಣಗಳು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕ ಶಕ್ತಿಯಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ಹೋರಾಟ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿತ್ತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿದರು.

ಈ ವೇಳೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಸಮಾಜ ಸೇವಕ ಹಾಗೂ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್, ಮಿತ್ರ ಫೌಂಡೇಶನ್ ಅಧ್ಯಕ್ಷ ವಿಜಯ್ ರಾಮೇಗೌಡ, ಪುತ್ಥಳಿ ದಾನಿ ಕೆ.ಚನ್ನಸಂದ್ರ ಹರೀಶ್, ಚಂದೇಗೌಡ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಸುರೇಶ್, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಕಾರ್ಯದರ್ಶಿ ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ವಕ್ತಾರ ಡಾ.ರಾಮಕೃಷ್ಣೇಗೌಡ, ಜಿಪಂ ಮಾಜಿ ಸದಸ್ಯ ದೇವರಾಜು, ಪುರಸಭಾ ಸದಸ್ಯರಾದ ಬಸ್ ಸಂತೋಷ್ ಕುಮಾರ್, ಕೆ.ಆರ್.ರವೀಂದ್ರಬಾಬು, ತಾಪಂ ಮಾಜಿ ಸದಸ್ಯ ಮಾಧವ ಪ್ರಸಾದ್, ಎ.ಬಿ.ಕುಮಾರ್, ಕಾಳಿದಾಸ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ರಂಗಸ್ವಾಮಿ, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಪ್ರಸನ್ನಕುಮಾರ್, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಎಲ್.ಪಿ.ನಂಜಪ್ಪ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಮ್ಮ, ಸದಸ್ಯರಾದ ದೊಡ್ಡೇಗೌಡ, ವರಲಕ್ಷ್ಮೀ, ಕುಮಾರ್, ನಂದಿನಿ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಉಪಾಧ್ಯಕ್ಷ ಎಲ್.ಎಸ್.ಧರ್ಮಪ್ಪ ಸೇರಿದಂತೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸೇರಿದಂತೆ ನೂರಾರು ಗಣ್ಯರು ಸಾವಿರಾರು ನಾಗರಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೊಡಗು ಜಿಲ್ಲಾ ನೂತನ ಎಸ್ಪಿಯಾಗಿ ಕೆ.ರಾಮರಾಜನ್ ನೇಮಕ

ಮಡಿಕೇರಿ, ಜ.30– ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಲೀರ ಎ.ಅಯ್ಯಪ್ಪ ಅವರನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದ್ದು, ಅವರಿಂದ ತೆರವಾದ ಸ್ಥಾನಕ್ಕೆ ಕೆ.ರಾಮರಾಜನ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.



ಕ್ಯಾಪ್ಟನ್ ಮಲ್ಲೀರ ಅಯ್ಯಪ್ಪ ಅವರನ್ನು ತಕ್ಷಣವೇ ಜಾರಿಗೆ ಬರುವಂತೆ ಬೆಂಗಳೂರು ಗುಪ್ತವಾರ್ತೆ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾಗಿ ನಿಯೋಜಿಸಲಾಗಿದೆ. ತೆರವಾದ ಸ್ಥಳಕ್ಕೆ ಬೆಂಗಳೂರು ಕಮಾಂಡ್ ಸೆಂಟರ್‌ನಲ್ಲಿ ಡಿಸಿಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ 2017ನೇ ಸಾಲಿನ ಐಪಿಎಸ್ ಅಧಿಕಾರಿ ಕೆ.ರಾಮರಾಜನ್ ಅವರನ್ನು ನಿಯುಕ್ತಿಗೊಳಿಸಿ ಸರ್ಕಾರ ಆದೇಶಿಸಿದೆ.

ಮಡಿಕೇರಿಯಲ್ಲಿ ಗಾಂಧೀಜಿ 75ನೇ ಪುಣ್ಯತಿಥಿ ಆಚರಣೆ

ಮಡಿಕೇರಿ, ಜ.30– ಅಹಿಂಸಾ ಮಾರ್ಗದ ಶಕ್ತಿ ಮತ್ತು ಮಹತ್ವವನ್ನು ಇಡೀ ವಿಶ್ವಕ್ಕೆ ಸಾರಿದ ಮಹಾನ್ ಚೇತನ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 'ಚಿತಾಭಸ್ಮ'ಕ್ಕೆ ಗೌರವ ಸಲ್ಲಿಸುವ ಮೂಲಕ 75ನೇ ಪುಣ್ಯತಿಥಿಯನ್ನು ಹುತಾತ್ಮರ ದಿನವನ್ನಾಗಿ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಆಚರಿಸಲಾಯಿತು.



ಜಿಲ್ಲಾ ಖಜಾನೆಯಲ್ಲಿರುವ ರಾಷ್ಟ್ರಪಿತನ ಚಿತಾಭಸ್ಮದ ಕರಂಡಿಕೆಯನ್ನು ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಸರ್ವೋದಯ ಸಮಿತಿ ಅಧ್ಯಕ್ಷ ಮುದ್ದಯ್ಯ, ಮುಖಂಡ ಟಿ.ಪಿ.ರಮೇಶ್ ಸೇರಿದಂತೆ ಹಲವರು ಜಿಲ್ಲಾ ಪೊಲೀಸ್ ವಾದ್ಯ ಗೋಷ್ಠಿಯೊಂದಿಗೆ ನಗರದ ಜ.ತಿಮ್ಮಯ್ಯ ವೃತ್ತದ ಮೂಲಕ ಗಾಂಧಿ ಮಂಟಪದವರೆಗೆ ಮೆರವಣಿಗೆ ನಡೆಸಿದರು. ಗಾಂಧಿ ಮಂಟಪದ ಮುಂಭಾಗ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮಕ್ಕೆ ಜಿಲ್ಲಾ ಪೊಲೀಸ್ ತಂಡದಿಂದ ಆಕಾಶಕ್ಕೆ 3 ಸುತ್ತಿನ ಗುಂಡು ಸಿಡಿಸುವ ಮೂಲಕ ಮತ್ತು ಸಿದ್ದೇಶ್ ನೇತೃತ್ವದ ಪೊಲೀಸ್ ವಾದ್ಯ ತಂಡ ರಾಷ್ಟ್ರಗೀತೆ ಮೂಲಕ ಗೌರವ ಸಲ್ಲಿಸಿತು. ಈ ವೇಳೆ 2 ನಿಮಿಷ ಮೌನಾಚರಣೆ ಮಾಡಲಾಯಿತು.

ಪುಷ್ಪಾರ್ಚನೆ: ಗಾಂಧಿ ಮಂಟಪದ ಮಹಾತ್ಮ ಗಾಂಧೀಜಿ ಪ್ರತಿಮೆಗೆ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಸರ್ವೋದಯ ಸಮಿತಿ ಅಧ್ಯಕ್ಷ ಮುದ್ದಯ್ಯ, ಮುಖಂಡ ಟಿ.ಪಿ.ರಮೇಶ್, ನಗರಸಭಾಧ್ಯಕ್ಷೆ ಅನಿತಾ ಪೂವಯ್ಯ, ಪೌರಾಯುಕ್ತ ವಿಜಯ್, ಎಸ್ಪಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ, ಎಸಿ ನಂಜುಂಡೇಗೌಡ, ಜಿಪಂ ಸಿಇಓ ಆಕಾಶ್, ಮುಖಂಡರಾದ ಬಿ.ಜಿ.ಅನಂತ ಶಯನ, ಸರ್ವೋದಯ ಸಮಿತಿ ಸದಸ್ಯರಾದ ಅಂಬೆಕಲ್ಲು ಕುಶಾಲಪ್ಪ, ಎಸ್.ಐ.ಮುನೀರ್ ಅಹಮದ್, ವಾಸು ಪುಟ್ಟಂಯ್ಯ, ಕೆ.ಟಿ.ಬೇಬಿ ಮ್ಯಾಥ್ಯು, ನವೀನ್ ಅಂಬೆಕಲ್ಲು, ರೇವತಿ ರಮೇಶ್, ಉದಯ ಕುಮಾರ್ ಸೇರಿದಂತೆ ಹಲವು ಗಣ್ಯರು ಪುಷ್ಪನಮನ ಸಲ್ಲಿಸಿದರು.

ಸರ್ವಧರ್ಮ ಪ್ರಾರ್ಥನೆ: ಮಹಾತ್ಮ ಗಾಂಧೀಜಿಯವರ ಬಹು ಪ್ರೀತಿಯ 'ವೈಷ್ಣವ ಜನತೇ' ಹಾಡನ್ನು ಖ್ಯಾತ ಗಾಯಕ ಲಿಯಾಕತ್ ಅಲಿ ಪ್ರಸ್ತುತಪಡಿಸಿದರು. ನಗರದ ಶ್ರೀಓಂಕಾರೇಶ್ವರ ದೇವಸ್ಥಾನದ ಸಂತೋಷ್ ಭಟ್‌ರಿಂದ ಭಗವದ್ಗೀತೆ, ಸಂತ ಮೈಕೆಲರ ಶಾಲೆ ಸಗಾಯ ಮೇರಿ ಅವರಿಂದ ಬೈಬಲ್, ಇಸಾಕ್ ಮೌಲವಿ ಅವರಿಂದ ಖುರಾನ್ ಪಠಣದೊಂದಿಗೆ ಸರ್ವಧರ್ಮ ಪ್ರಾರ್ಥನೆ ನೆರವೇರಿಸಲಾಯಿತು.

ಹುತಾತ್ಮ ದಿನಾಚರಣೆಯಲ್ಲಿ ನಗರದ ಸಂತ ಮೈಕಲರ ಶಾಲೆ ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಪಾಲ್ಗೊಂಡು ರಾಷ್ಟ್ರಪಿತನಿಗೆ ಗೌರವ ಸಲ್ಲಿಸಿದರು.

ಮಾಜಿ ಎಂಎಲ್‌ಸಿ ರಮೇಶ್, ಅವರ ಪುತ್ರ ಅರ್ಜುನ್‌ರಿಂದ ಅಧಿಕಾರ ದುರ್ಬಳಕೆ

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಆರೋಪ

ತಿ.ನರಸೀಪುರ, ಜ.30– ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಹಾಗೂ ಅವರ ಪುತ್ರ ಪುರಸಭಾ ಸದಸ್ಯ ಅರ್ಜುನ್ ಉದ್ಯಮಿಗಳು ಹಾಗೂ ಉಳ್ಳವರನ್ನು ಬೆದರಿಸಿ ರೋಲ್‌ಕಾಲ್ ಮಾಡಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಆರೋಪಿಸಿದರು.



ಪಟ್ಟಣದ ಚಿಕ್ಕಮ್ಮತಾಯಿ ಯಾತ್ರಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಂದೆ, ಮಗ ಪವಿತ್ರವಾದ ರಾಜಕಾರಣವನ್ನು ರೋಲ್‌ಕಾಲ್‌ಗಾಗಿ ಬಳಸಿಕೊಳ್ಳುತ್ತಿರುವುದು ಪಟ್ಟಣದ ಜನತೆಯ ದುರ್ದೈವ ಎಂದು ವಿಷಾದಿಸಿದರು.

ಸಿ.ರಮೇಶ್ ತಮ್ಮ ಅಧಿಕಾರ ವ್ಯಾಪ್ತಿ ಅರಿವಿಲ್ಲದೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಏಕವಚನ ಪದಬಳಕೆ ಮಾಡಿದ್ದಾರೆ. ಕೇವಲ ಆಶ್ರಯ ಸಮಿತಿ ಸದಸ್ಯರಾಗಿರುವ ಇವರಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವ ಅರ್ಹತೆ ಇದೆಯೇ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ರಾಜ್ಯದ 224 ಕ್ಷೇತ್ರಗಳ ಪೈಕಿ ಎಲ್ಲೇ ಸ್ಪರ್ಧಿಸಿದರೂ, ಗೆಲ್ಲುವ ಸಾಮರ್ಥ್ಯ ಹೊಂದಿರುವ ಧೀಮಂತ ನಾಯಕ. ಅಂತಹವರ ಬಗ್ಗೆ ಏಕವಚನದಲ್ಲಿ ಮಾತನಾಡುವ ಅರ್ಹತೆಯಾಗಲೀ ನೈತಿಕತೆಯಾಗಲೀ ಅವರಿಗಿಲ್ಲ. ಸಿದ್ದರಾಮಯ್ಯನವರು ತಮ್ಮ ರಾಜಕೀಯ ಜೀವನದಲ್ಲಿ ಎಂದೂ ಹಿಂಬಾಗಿಲ ರಾಜಕಾರಣ ಮಾಡಿಲ್ಲ. ಚುನಾವಣೆಗೆ ನೇರವಾಗಿ ಸ್ಪರ್ಧಿಸಿ ಸಾವಿರಾರು ಮತಗಳ ಅಂತರದಿಂದ ಗೆಲುವು ಸಾಧಿಸಿರುವ ಕೆಚ್ಚೆದೆಯ ನಾಯಕ. ಸಿ.ರಮೇಶ್ ಅವರಂತೆ ಹಿಂಬಾಗಿಲಿನಿಂದ ವಿಧಾನಸಭೆ ಪ್ರವೇಶಿಸಿಲ್ಲ. ಸಿದ್ದರಾಮಯ್ಯರ ತಾಕತ್ತು, ಧಮ್ಮಿನ ಬಗ್ಗೆ ಪ್ರಶ್ನಿಸಿರುವ ಸಿ.ರಮೇಶ್ ಅವರಿಗೆ ತಾಕತ್ತಿದ್ದರೆ, ಒಮ್ಮೆ ವಿಧಾನಸಭೆ ಟಿಕೆಟ್ ಪಡೆದು ಸ್ಪರ್ಧಿಸಿ ತೋರಿಸಲಿ ಎಂದು ಸವಾಲು ಹಾಕಿದರು.

ಸಾಮಾನ್ಯ ಕಾರ್ಯಕರ್ತನಿಗಿಂತಲೂ ಕಡೆ!: 2013ರ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಪಡೆದು ಸ್ಪರ್ಧಿಸಿದ್ದ ಸಿ.ರಮೇಶ್ ಕೇವಲ 5175 ಮತ ಪಡೆದು ಹೀನಾಯವಾಗಿ ಸೋತಿದ್ದನ್ನು ಅವರ ಪಕ್ಷವೂ ಮರೆತಿಲ್ಲ. ಕ್ಷೇತ್ರದ ಜನತೆಯೂ ಮರೆತಿಲ್ಲ. ಪಕ್ಷದ ಚಿನ್ಹೆಯಡಿ ಸ್ಪರ್ಧಿಸಿದ್ದರೆ, ಸಾಮಾನ್ಯ ಕಾರ್ಯಕರ್ತನೂ ಸಹ 20 ಸಾವಿರ ಮತಗಳನ್ನು ಪಡೆಯುತ್ತಿದ್ದ. ಒಬ್ಬ ಜಿಪಂ ಸದಸ್ಯ 5 ಸಾವಿರಕ್ಕಿಂತಲೂ ಹೆಚ್ಚು ಮತ ಗಳಿಸುತ್ತಿದ್ದ. ಆದರೆ ನೀವು ಪಡೆದ ಮತಗಳೆಷ್ಟು? ನೀವು ಸಾಮಾನ್ಯ ಕಾರ್ಯಕರ್ತನಿಗಿಂತಲೂ ಕಡೆಯಾಗಿದ್ದೀರಾ, ನಿಮಗೆ ರಾಜ್ಯದ ಧೀಮಂತ ನಾಯಕರನ್ನು ಏಕವಚನದಲ್ಲಿ ಟೀಕಿಸುವ ಯೋಗ್ಯತೆ ಇದೆಯೇ ಎಂದು ಪ್ರಶ್ನಿಸಿದರು.

ತಂದೆಯಂತೆಯೇ ಮಗ: ಸಿ.ರಮೇಶ್ ಅವರ ಪುತ್ರ ಅರ್ಜುನ್ ಸಹ ತಂದೆಯನ್ನೇ ಹಿಂಬಾಲಿಸುತ್ತಿದ್ದು, ಅರ್ಜುನ್ ಪುರಸಭೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ರೈಸ್‌ಮಿಲ್, ಬಾರ್ ಅಂಡ್ ರೆಸ್ಟೋರೆಂಟ್‌ನಂತಹ ದೊಡ್ಡ ದೊಡ್ಡ ಉದ್ಯಮಿಗಳ ಮೇಲೆ ಕಣ್ಣಿಟ್ಟು ಇಲ್ಲಸಲ್ಲದ ಆರೋಪ ಮಾಡಿ ಹೆದರಿಸಿ ಬೆದರಿಸಿ ರೋಲ್‌ಕಾಲ್ ಮಾಡಲು ಮುಂದಾಗಿದ್ದಾರೆ. ಈ ಹಿಂದೆ ನಾನೇ ಅಧ್ಯಕ್ಷನಾಗಿದ್ದ ವೇಳೆ ನನ್ನದೇ ಖಾಸಗಿ ಆಸ್ತಿ ಬಗ್ಗೆ ಪ್ರಸ್ತಾಪಿಸಿ ಸರ್ಕಾರದ ಅನುದಾನ ಪಡೆದು ಖಾಸಗಿ ಪ್ರಾಪರ್ಟಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ್ದರು. ಇದನ್ನು ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸುವ ಹಿಂದಿನ ದಿನ ತನ್ನ ಹಿಂಬಾಲಕನನ್ನು ಕಳುಹಿಸಿ ವಿಷಯ ಪ್ರಸ್ತಾಪಿಸುವುದು ಬೇಡವೆಂದರೆ 25 ಲಕ್ಷ ಕೊಡುವಂತೆ ಬೇಡಿಕೆ ಇಟ್ಟಿದ್ದರು ಎಂದು ಗಂಭೀರ ಆರೋಪ ಮಾಡಿದರು. ಆದರೆ ನಾನು ಸಾಮಾನ್ಯ ಸಭೆಯಲ್ಲಿ ನನ್ನ ಖಾಸಗಿ ಆಸ್ತಿ ಅಕ್ರಮವಾಗಿ ನಿರ್ಮಾಣವಾಗಿರುವುದನ್ನು ಸಾಬೀತು ಪಡಿಸಿದರೆ ಯಾತ್ರಿ ಭವನವನ್ನೂ ಸಾರ್ವಜನಿಕರಿಗೆ ಕೊಟ್ಟು ಬಿಡುವುದಾಗಿ ಅರ್ಜುನ್‌ಗೆ ಸವಾಲಾಕಿದ್ದೆ. ಆದರೆ ಇದೇ ಅರ್ಜುನ್ ಒಂದು ವರ್ಷವಾದರೂ ಇದುವರೆಗೂ ಯಾವುದನ್ನು ಸಾಬೀತು ಪಡಿಸಲು ಸಾಧ್ಯವಾಗಿಲ್ಲ. ಹಾಗಾಗಿ ಪುರಸಭೆಯಲ್ಲಿ ಮುಖ್ಯಾಧಿಕಾರಿ ಬಸವರಾಜು ಅವರಿಗೆ ಬೆದರಿಕೆಯೊಡ್ಡಿ ಅವರಿಂದ ತಮಗೆ ಅನುಕೂಲವಾಗುವಂತಹ ಕೆಲಸಗಳನ್ನು ಅಪ್ಪ ಮಕ್ಕಳಿಬ್ಬರೂ ಮಾಡುತ್ತಿದ್ದು, ಮುಖ್ಯಾಧಿಕಾರಿಗಳು ಯಾವುದಕ್ಕೂ ಹೆದರದೇ ತಮ್ಮ ಕರ್ತವ್ಯವನ್ನು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಮಾಡಬೇಕು, ಅವರ ಬೆಂಬಲಕ್ಕೆ ನಾನು ಸಿದ್ಧ ಎಂದರು.

ಇಬ್ಬರು ಮನೆಗಳವು ಆರೋಪಿಗಳ ಬಂಧನ



ಭಾರತೀನಗರ, ಜ.30– ಹಾಡಹಗಲೇ ಮನೆಗಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಕೆ.ಎಂ.ದೊಡ್ಡಿ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೇಣುಗೋಪಾಲ್ ತಿಳಿಸಿದರು.

ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ನಿವಾಸಿ ಮೊಹಮ್ಮದ್ ರಫೀಕ್(27) ಹಾಗೂ 17 ವರ್ಷದ ಅಪ್ರಾಪ್ತ ಬಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿ, ಅವರಿಂದ 18 ಲಕ್ಷ ರೂ. ಮೌಲ್ಯದ 271 ಗ್ರಾಂ ಚಿನ್ನಾಭರಣ, 50ಗ್ರಾಂ ತೂಕದ ಬೆಳ್ಳಿಡಾಬು, 5 ಸಾವಿರ ನಗದು, ಒಂದು ಗೂಡ್ಸ್ ಆಟೋ, ಕೃತ್ಯಕ್ಕೆ ಬಳಸಿದ್ದ 2 ಬೈಕ್‌ಗಳು ಹಾಗೂ ಕಳವು ಮಾಡಿದ್ದ ಮತ್ತೆರೆಡು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇಲ್ಲಿನ ಪೊಲೀಸ್ ಠಾಣಾ ಆವರಣದಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಜ.4ರಂದು ಕಾಡುಕೊತ್ತನಹಳ್ಳಿ ನಿವಾಸಿ ಸುನೀತ ಕಿರಣ್ ಕುಮಾರ್ ಎಂಬುವರು ತಮ್ಮ ತವರು ಮನೆಗೆ ಹೋಗಿದ್ದ ವೇಳೆ ಆರೋಪಿಗಳು ಮನೆಯಲ್ಲಿ ಕಳ್ಳತನ ಮಾಡಿದ್ದರು. ಈ ಸಂಬಂಧ ಕೆ.ಎಂ. ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಸ್‌ಪಿ ಯತೀಶ್, ಎಎಸ್ಪಿ ವೇಣುಗೋಪಲ್, ಡಿವೈಎಸ್‌ಪಿ ನವೀನ್‌ಕುಮಾರ್ ಮಾರ್ಗದರ್ಶನದಲ್ಲಿ ಸಿಪಿಐ ಶಿವಮಲವಯ್ಯ, ಎಸ್‌ಐ ರಂಗಸ್ವಾಮಿ, ಭೀಮಪ್ಪ ಎಎಸ್‌ಐ ಕರೀಗೌಡ ಹಾಗೂ ಸಿಬ್ಬಂದಿಗಳ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರೊಂದಿಗೆ 6 ಪ್ರಕರಣ ಬೆಳಕಿಗೆ ಬಂದಿದೆ.

ಗೌರಮ್ಮ ನಿಧನ

ಕೆಆರ್.ಪೇಟೆ, ಜ.30– ತಾಲೂಕಿನ ಬೂಕನಕೆರೆ ಗ್ರಾಮದ ವೀರಶೈವ ಸಮಾಜದ ಹಿರಿಯ ಮುಖಂಡ ವೀರಭದ್ರಪ್ಪ ಅವರ ಧರ್ಮಪತ್ನಿ ಗೌರಮ್ಮ (74) ಸೋಮವಾರ ನಿಧನರಾದರು.



ಮೃತರು ಮೂವರು ಪುತ್ರರು, ಸಹೋದರ ಕೃಷ್ಣರಾಜ ಪದವಿ ಪೂರ್ವ ಕಾಲೇಜಿನ ಆಡಳಿತಾಧಿಕಾರಿ ಎಸ್.ಬಿ.ಲೋಕೇಶ್, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೂಕನಕೆರೆಯಲ್ಲಿ ಇಂದು ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿರತೆ ದಾಳಿ: ಕಾರ್ಮಿಕನಿಗೆ ತೀವ್ರ ಗಾಯ

ಕೆ.ಆರ್.ಪೇಟೆ, ಜ.30– ಚಿರತೆ ದಾಳಿಗೆ ಕಾರ್ಮಿಕನೋರ್ವ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ರಾಯಸಮುದ್ರ ಗ್ರಾಮದ ಬಳಿ ನಡೆದಿದೆ.



ಮೂಲತಃ ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ನಾಗತಿ ಬೆಳಗೊಳ ತಾಂಡ ನಿವಾಸಿ ಜಯರಾಮು(55) ಗಾಯಗೊಂಡವರು. ಈತ ಕಳೆದ 4 ತಿಂಗಳಿಂದ ತಾಲೂಕಿನ ಬೊಮ್ಮನಾಯಕನಹಳ್ಳಿಯಲ್ಲಿ ತಾತ್ಕಾಲಿಕ ಶೆಡ್‌ನಲ್ಲಿ ವಾಸವಾಗಿದ್ದು ಎನ್ನಲಾಗಿದೆ. ಜಯರಾಮು ಮತ್ತು ತಂಡದವರು ಭಾನುವಾರ ಬೆಳಗ್ಗೆ ತಾಲೂಕಿನ ರಾಯಸಮುದ್ರ ಗ್ರಾಮದ ನಿವಾಸಿ ತಾಯಮ್ಮ ಕೋಂ ಹುರೀಗೌಡ ಎಂಬುವರ ಜಮೀನಿನ ಬಳಿ ಕೋರಮಂಡಲ್ ಸಕ್ಕರೆ ಕಾರ್ಖಾನೆಗೆ ಕಬ್ಬು ಕಡಿಯುತ್ತಿದ್ದ ವೇಳೆ ಗದ್ದೆಯಲ್ಲಿದ್ದ ಚಿರತೆ ಜಯರಾಮು ಮೇಲೆ ಏಕಾಏಕಿ ದಾಳಿ ನಡೆಸಿ ಗಾಯಗೊಳಿಸಿದೆ. ಈ ವೇಳೆ ಸ್ಥಳದಲ್ಲಿದ್ದವರ ಕೂಗಾಟದಿಂದ ಚಿರತೆ ಪರಾರಿಯಾಗಿದ್ದು, ಜಯರಾಮು ಅವರಿಗೆ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಲಾಗಿದೆ. ತಾಲೂಕು ಆರ್‌ಎಫ್‌ಓ ಗಂಗಾಧರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಚಿರತೆ ಸೆರೆಗೆ ಬೋನಿಟ್ಟು ಕಾರ್ಯಾಚರಣೆ ಆರಂಭಿಸಿದ್ದಾರೆ.

ಬಸವೇಶ್ವರ ಪ್ರತಿಮೆ ಸ್ಥಳ ಬದಲಾವಣೆಗೆ ಆಗ್ರಹ


ಚಾಮರಾಜನಗರ, ಜ.30– ನಗರದ ಜಿಲ್ಲಾಡಳಿತ ಭವನದ ಪಕ್ಕದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಸವೇಶ್ವರರ ಪ್ರತಿಮೆ ಸ್ಥಳ ಬದಲಾಯಿಸ ಬೇಕು ಎಂದು ಬಿಜೆಪಿ ಮುಖಂಡ ಅಮ್ಮನಪುರ ಮಲ್ಲೇಶ್ ಆಗ್ರಹಿಸಿದರು.



ನಗರದ ಜಿಲ್ಲಾಡಳಿತ ಭವನಕ್ಕೆ ಲಿಂಗಾಯಿತ ಮುಖಂಡರೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನಂತರ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರಿಗೆ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಜ.26ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಬಸವೇಶ್ವರ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗಿದ್ದು, ಈ ಜಾಗ ಡಾ.ರಾಜ್‌ಕುಮಾರ್ ರಂಗಮಂದಿರದ ಆವರಣಕ್ಕೆ ಸೇರಿದ್ದಾಗಿದೆ. ಅಲ್ಲಿ ಯಾವುದೇ ಕಾರಣಕ್ಕೂ ಬಸವೇಶ್ವರ ಪ್ರತಿಮೆ ನಿರ್ಮಿಸುವುದು ಸೂಕ್ತವಲ್ಲ ಎಂದರು. ಜಿಲ್ಲಾಧಿಕಾರಿ ಕಚೇರಿ ಮುಖ್ಯದ್ವಾರದ ನೀರಿನ ಝರಿ ಪಕ್ಕ ಪ್ರತಿಮೆ ನಿರ್ಮಿಸಲು ಸ್ಥಳ ಪ್ರಾಶಸ್ತ್ಯವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತೊಮ್ಮೆ ನಾವು ತೋರಿಸಿರುವ ಜಾಗದಲ್ಲೇ ಶಂಕುಸ್ಥಾಪನೆ ಮಾಡುವ ಮೂಲಕ ಈ ಭಾಗದ ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಕೊತ್ತಲವಾಡಿ ಕುಮಾರ್, ಗುರುಸ್ವಾಮಿ, ಯಲಕ್ಕೂರು ಮಧು, ಕಾವುದವಾಡಿ ಗುರು, ನಗರಸಭಾ ಸದಸ್ಯ ಬಸವಣ್ಣ, ಹೈಟೆಕ್ ಶಿವು ಇದ್ದರು.

ರಾಮನಾಥತುಂಗಾದಲ್ಲಿ ಚಿರತೆ ಮರಿ ಸೆರೆ

ಪಿರಿಯಾಪಟ್ಟಣ, ಜ.30– ತಾಲೂಕಿನ ರಾಮನಾಥ ತುಂಗಾದಲ್ಲಿ ಸಾಕುಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ಚಿರತೆ ಮರಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.



ಗ್ರಾಮದ ಜಮೀನಿನಲ್ಲಿ ಹೆಣ್ಣು ಚಿರತೆ ತನ್ನ 2 ಮರಿ ಚಿರತೆಯೊಂದಿಗೆ ಬೀಟು ಬಿಟ್ಟು, ರಾತ್ರಿ ವೇಳೆ ಕುರಿ, ಕೋಳಿ ಸೇರಿದಂತೆ ಸಾಕು ಪ್ರಾಣಿಗಳನ್ನು ಬೇಟೆಯಾಡುತ್ತಿತ್ತು. ಇದರಿಂದ ಗ್ರಾಮಸ್ಥರು ಭಯಗೊಂಡು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಅದರಂತೆ ಜ.28ರಂದು ಅರಣ್ಯಾಧಿಕಾರಿಗಳು ಇಟ್ಟಿದ್ದ ಬೋನಿಗೆ 2 ವರ್ಷದ ಗಂಡು ಚಿರತೆ ಮರಿ ಬಿದ್ದಿದೆ. ಸ್ಥಳಕ್ಕೆ ನಾಗರಹೊಳೆ ಹುಲಿ ಸಂರಕ್ಷಣಾ ವಲಯದ ಡಾ.ರಮೇಶ್, ಆರ್‌ಎಫ್‌ಓ ಕಿರಣ್ ಕುಮಾರ್, ಡಿಆರ್‌ಎಫ್ ಪಾರ್ವತಿ ಹಾಗೂ ಸಿಬ್ಬಂದಿ ಚಿರತೆಯನ್ನು ಪಿರಿಯಾಪಟ್ಟಣದ ವಲಯ ಕಚೇರಿಗೆ ಸ್ಥಳಾಂತರಿಸಿದ್ದು, ತಿತಿಮತಿಯ ದೇವಮಚ್ಚಿ ಮೀಸಲು ಅರಣ್ಯ ಪ್ರದೇಶಕ್ಕೆ ಮರಿ ಬಿಡಲಾಯಿತು.

ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ: ಸವಾರ ಸಾವು

ಭಾರತೀನಗರ, ಜ.30– ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿ, ಮತ್ತೋರ್ವ ತೀವ್ರ ಗಾಯಗೊಂಡಿರುವ ಘಟನೆ ಇಲ್ಲಿನ ಗುಡಿಗೆರೆ ಗೇಟ್ ಬಳಿ ನಡೆದಿದೆ.

ಕೆರಗೋಡು ಹೋಬಳಿ ಜೀಗುಂಡಿ ಪಟ್ಟಣ ನಿವಾಸಿ ಪುನೀತ್ (27) ಸಾವನ್ನಪ್ಪಿದ್ದು, ಹೊಸೂರು ಕಾಲೋನಿಯ ಮಂಜು ಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಖಾಸಗಿ ಬಸ್ ಅನ್ನು ವಶಪಡಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಪಕ್ಷಿ ಸಮೀಕ್ಷೆ ಮುಕ್ತಾಯ: 2 ಹೊಸ ಪ್ರಭೇದ ಪತ್ತೆ

ಚಾಮರಾಜನಗರ, ಜ.30– ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಮುಕ್ತಾಯಗೊಂಡ ಪಕ್ಷಿ ಸಮೀಕ್ಷೆಯಲ್ಲಿ ಎರಡು ಹೊಸ ಪ್ರಭೇದ ಪಕ್ಷಿಗಳು ಪತ್ತೆಯಾಗಿವೆ.



ವಲಸೆ ಪಕ್ಷಿಗಳಾದ ನಾದರ್ನ್ ಶೆವೆಲರ್ (ಸಲಿಕೆ ರೀತಿಯ ಕೊಕ್ಕುಳ್ಳ ಬಾತು) ಹಾಗೂ ನಾದರ್ನ್ ಫಿನ್‌ಟೇಲ್ (ಸೂಜಿಬಾಲದ ಬಾತು) ಪಕ್ಷಿಗಳನ್ನು ಸ್ವಯಂ ಸೇವಕರು ಹೊಸದಾಗಿ ಗುರುತಿಸಿದ್ದಾರೆ ಎಂದು ಬಿಆರ್‌ಟಿ ನಿರ್ದೇಶಕ ಮತ್ತು ಡಿಸಿಎಫ್ ದೀಪ್ ಜೆ.ಕಾಂಟ್ರಾಕ್ಟರ್ ಹೇಳಿದ್ದಾರೆ.

ಹಲವು ವರ್ಷದ ನಂತರ ದಿ ಗ್ರೇಟ್ ಹಾರ್ನ್‌ಬಿಲ್ ಪಕ್ಷಿಯೂ ಬಿಆರ್‌ಟಿಯಲ್ಲಿ ಕಂಡು ಬಂದಿದೆ. 2012ರಲ್ಲಿ ವೈಜ್ಞಾನಿಕವಾಗಿ ಪಕ್ಷಿ ಗಣತಿ ಮಾಡಲಾಗಿತ್ತು. ಆಗ 272 ಪ್ರಭೇದಗಳನ್ನು ಗುರುತಿಸಲಾಗಿತ್ತು. ಈ ಬಾರಿ ಸ್ವಯಂ ಸೇವಕರು 274 ಪಕ್ಷಿಗಳನ್ನು ಗುರುತಿಸಿದ್ದಾರೆ ಎಂದು ಹೇಳಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪಠಾಣ್ (ಹಿಂ): ಬೆ.10ಕ್ಕೆ, ಮ.1.1.0ಕ್ಕೆ, ರಾ.7.25ಕ್ಕೆ, ರಾ.10.15ಕ್ಕೆ, ಕ್ರಾಂತಿ (ಕ): ಸಂ.4.05ಕ್ಕೆ.
ಸ್ಕ್ರೀನ್ 2	ಗಾಂಧಿ ಗೋಡ್ಸೆ ಏಕ್ ಯುದ್ (ಹಿಂ): ಬೆ.11ಕ್ಕೆ, ಸಂ.4.30ಕ್ಕೆ, ವಾರಿಸು (ತ): ಮ.1.15ಕ್ಕೆ, ಕ್ರಾಂತಿ (ಕ): ಸಂ.6.50ಕ್ಕೆ, ಅಲೋನ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.9.45ಕ್ಕೆ, ಮ.12.55ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಸಂ.4.15ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಕ್ರಾಂತಿ (ಕ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6ಕ್ಕೆ, ರಾ.9.20ಕ್ಕೆ, ಆರ್ ಸಿ ಬ್ರದರ್ಸ್ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ಪಠಾಣ್ (ಹಿಂ): ಬೆ.9.45ಕ್ಕೆ, ಮ.12.45ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 4	ಪಠಾಣ್ (ಹಿಂ): ಬೆ.10.45ಕ್ಕೆ, ರಾ.9.15ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ (ಹಿಂ): ಮ.1.45ಕ್ಕೆ, ಸಂ.6.50ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಠಾಣ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕ್ರಾಂತಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಠಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಕ್ರಾಂತಿ (ಕ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	2 ಪ್ರದರ್ಶನಗಳು
ವಾರಿಸು (ತ)	2 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ತುನಿವು (ತ)	4 ಪ್ರದರ್ಶನಗಳು
ಪ್ರಭಾ	
ಪಠಾಣ್ (ಹಿ)	2 ಪ್ರದರ್ಶನಗಳು

ಚಾ.ನಗರಕ್ಕೆ ಪದ್ಮಿನಿ ಸಾಹೋ ನೂತನ ಎಸ್‌ಪಿ

ಚಾಮರಾಜನಗರ, ಜ.30– ಚಾಮರಾಜನಗರ ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿ ಕಾರಿಯಾಗಿ ಐಪಿಎಸ್ ಅಧಿಕಾರಿ ಪದ್ಮಿನಿ ಸಾಹೋ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಅವರನ್ನು ಕೆಪಿಟಿಸಿಎಲ್ ವಿಜಿಲೆನ್ಸ್ ಎಸ್ಪಿ ಯಾಗಿ ವರ್ಗಾವಣೆ ಮಾಡಲಾಗಿದ್ದು, ಬೆಂಗಳೂರಿನ ಸಹಾಯಕ ಪೊಲೀಸ್ ಮಹಾನಿರೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಪದ್ಮಿನಿ ಸಾಹೋ ಅವರನ್ನು ಜಿಲ್ಲಾ ಎಸ್ಪಿ ಆಗಿ ನೇಮಕ ಮಾಡಲಾಗಿದೆ. ಈ ಮೂಲಕ ಜಿಲ್ಲೆಯ 2ನೇ ಮಹಿಳಾ ಎಸ್ಪಿ ಎಂಬ ಹೆಗ್ಗಳಿಕೆಗೆ ಪದ್ಮಿನಿ ಸಾಹೋ ಪಾತ್ರರಾಗಿದ್ದಾರೆ. ಇದಕ್ಕೂ ಮೊದಲು ಜಿಲ್ಲೆಯಲ್ಲಿ ದಿವ್ಯಾ ಸಾರಾ ಥಾಮಸ್ ಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಸೋಮವಾರ ಸಂಜೆ ಅಧಿಕಾರ ಸ್ವೀಕರಿಸಿದ ನೂತನ ಎಸ್‌ಪಿ ಪದ್ಮಿನಿ ಸಾಹೋ ಮಾತನಾಡಿ, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಜೊತೆಗೆ ಜಿಲ್ಲೆಯಲ್ಲಿ ಪ್ರಮುಖ ವಾಗಿರುವ ವಿಚಾರಗಳ ಮಾಹಿತಿ ಪಡೆದು ಆ ಬಗ್ಗೆ ಹೆಚ್ಚಿನ ಗಮನಹರಿಸುತ್ತೇನೆ ಎಂದರು.


ಎಂ.ಸಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರು, ಅಪೆಕ್ಸ್ ಬಾಂಕ್‌ನ ಉಪಾಧ್ಯಕ್ಷರಾದ
ಜಿ.ಡಿ.ಹರೀಶ್‌ಗೌಡ ಅವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಸಿ ರೇವಣ್ಣ
ಅಧ್ಯಕ್ಷರು
ಕೆ.ಉಮಾಶಂಕರ್
ನಿರ್ದೇಶಕರು
ಎಸ್.ಸೋಮಣ್ಣ
ನಿರ್ದೇಶಕರು
ಪಿ.ರಾಜೇಶ್ವರಿ
ನಿರ್ದೇಶಕರು
ಪಿ.ಸವಿತಾ
ನಿರ್ದೇಶಕರು
ಜೆ.ಯೋಗೇಶ್
ನಿರ್ದೇಶಕರು
ಹೆಚ್.ಹರೀಶ್‌ಕುಮಾರ್
ನಿರ್ದೇಶಕರು
ಪಡುವಾರಹಳ್ಳಿ
ಎಂ ರಾಮಕೃಷ್ಣ
ವಕೀಲರು & ನಿರ್ದೇಶಕರು
ದಿ. ಮೈಸೂರು ಕೋ-ಆಪರೇಟಿವ್ ಬ್ಯಾಂಕ್, ಮೈಸೂರು


36
ಹುಟ್ಟುಹಬ್ಬ
ಮೈಸೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರು
ಅಫೆಕ್ಸ್ ಬ್ಯಾಂಕಿನ ರಾಜ್ಯ ಉಪಾಧ್ಯಕ್ಷರಾದ
ಈರೇಗೌಡ್ರು
ಮೈಮುಲ್ ನಿರ್ದೇಶಕರು
ಸನ್ಮಾನ್ಯ ಶ್ರೀ ಜಿ.ಡಿ. ಹರೀಶ್‌ಗೌಡ್ರುರವರಿಗೆ
36ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಹಾಲು ಉತ್ಪಾದಕರ
ಸಹಕಾರ ಸಂಘ, ಹೆಚ್.ಡಿ. ಕೋಟೆ ಮತ್ತು ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ
ಸುದೀರ್
ಸಕಲೇಶ್
ಉಮೇಶ್
ಮಹದೇವಸ್ವಾಮಿ
ಮಲ್ಲಿಕಾರ್ಜುನ್
ಜಯರಾಮ್
ಮಂಜುನಾಥ್
ಸ್ವಾಮಿ
ಶಿವಕುಮಾರ್
ಜಗದೀಶ್
ನವೀನ್
ಸಚಿನ್
ನಾಗೇಂದ್ರ
ಮಹೇಶ್
ಮಧು
ರಾಮು
ನಿಂಗರಾಜು
ಚಂದ್ರಶೇಖರ್
ಮಹದೇವಪ್ಪ
ಚೇತನ್
ಹನುಮಂತು
ಕುಮಾರಿ
ಸುನಂದ
ವೇದಾವತಿ
ಮೇರಿ
ಪುನೀತ ಕುಮಾರಿ
ರೇಖಾ
ಸುಶೀಲಮ್ಮ
ಪ್ರೀತಿ
ರತ್ನಮ್ಮ
ಸಮಿತ್ರ
ನಾಗೇಶ್


ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ
ಸಹಕಾರ ಕೇಂದ್ರ ಬ್ಯಾಂಕ್ ನಿ.,
ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು - 570001
ಶ್ರೀ ಜಿ.ಡಿ.ಹರೀಶ್ ಗೌಡ
ರವರಿಗೆ
ಜನ್ಮದಿನದ ಶುಭಾಶಯಗಳು
ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರು.
ಶುಭಾಶಯ ಕೋರುವವರು : ಆಡಳಿತ ಮಂಡಳಿ, ಮೈಸೂರು ಮತ್ತು ಚಾಮರಾಜನಗರ
ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮೈಸೂರು
VISMAYA
PRINTS
8050302424


ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷರು,
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾದ ಸನ್ಮಾನ್ಯ
ಶ್ರೀ ಜಿ.ಡಿ.ಹರೀಶ್ ಗೌಡ ರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು :
ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ನೌಕರರ ಒಕ್ಕೂಟದ ಅಧ್ಯಕ್ಷರು
ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಹಾಗೂ ಬ್ಯಾಂಕ್ ನೌಕರರ ವರ್ಗ
VISMAYA PRINTS 8050302424